ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 5 । ಸಂಚಿಕೆ : 8 । ಆಗಸ್ಟ್ - 2023 । ಪುಟಗಳು : 20 । ಬೆಲೆ : 25/-

76ನೇ

## ಭಾರತ ಸ್ವಾತಂತ್ರ್ಯೋತ್ಸವ



ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು
ಭಾರತ ಸರ್ಕಾರ



ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ





ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು




ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

ಆಡಳಿತ ಮಂಡಳಿ ನಿರ್ದೇಶಕರುಗಳು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.




ನವದೆಹಲಿಯಲ್ಲಿ ನಡೆದ 17ನೇ ಅಂತರಾಷ್ಟ್ರೀಯ ಸಹಕಾರ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮಹಾಮಂಡಳದ ನಿರ್ದೇಶಕರಾದ ಡಾ|| ಸಂಜಯ ಪಿ. ಹೊಸಮಠ ಮತ್ತು ಶ್ರೀ ಹೊನ್ನಯ್ಯ ವಿ. ಹಿರೇಮಠರವರು **NAFCUB** ಅಧ್ಯಕ್ಷರಾದ ಶ್ರೀ ಜ್ಯೋತಿಂದ್ರ ಮೆಹೆತಾ ಹಾಗೂ ಹಿರಿಯ ಸಹಕಾರಿಗಳಾದ ಶ್ರೀ ಉದಯ್ ವಾಸುದೇವ ಜೋಶಿ ಹಾಗೂ **RBI**ನ ನಿರ್ದೇಶಕರಾದ ಶ್ರೀ ಸತೀಶ್ ಮರಾಠೆ ಅವರೊಂದಿಗೆ ಭೇಟಿಯಾದ ಸಂದರ್ಭ




ಶ್ರೀ ಸತೀಶ್ ಚಂದ್ರ ಕ್ಯಾಂಪ್ಕೋ ಮಾಜಿ ಅಧ್ಯಕ್ಷರು ಹಾಗೂ ಭಾರತೀಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಉದಯ್ ವಾಸುದೇವ ಜೋಶಿ ಮತ್ತು ಭಾರತೀಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಸಂಜಯ ಪಾಚ್ಪೋರ್ ರವರುಗಳು ಪತ್ತಿನ ಮಹಾಮಂಡಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರ ಪ್ರಸಾದ್ ಗೌಡರವರು ಸನ್ಮಾನಿಸಿದರು, ನಿರ್ದೇಶಕರಾದ ಡಾ||ಸಂಜಯ ಪಿ. ಹೊಸಮಠರವರು ಉಪಸ್ಥಿತರಿದ್ದರು.




ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಬಳಕೆ ಮತ್ತು ಮಾರಾಟ ವಿಭಾಗದ ಅಪರ ನಿಬಂಧಕರಾದ ಶ್ರೀ ಬಾಲಶೇಖರ್ ಅವರನ್ನು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡ ಮತ್ತು ನಿರ್ದೇಶಕರಾದ ಶ್ರೀ ಕೆ.ಕೃಷ್ಣಮೂರ್ತಿರವರುಗಳು ಭೇಟಿ ಮಾಡಿ ಅಭಿನಂದಿಸಿ ಶುಭ ಕೋರಿದರು. ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಆಶಾಲತಾ ಪಿ. ರವರು ಉಪಸ್ಥಿತರಿದ್ದರು.



ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಪಟ್ಟಣ ಬ್ಯಾಂಕುಗಳ ವಿಭಾಗದ ಜಂಟಿ ನಿಬಂಧಕರಾದ ಪಿ. ಮಹೇಶ್ ಅವರನ್ನು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡ ಮತ್ತು ನಿರ್ದೇಶಕರಾದ ಶ್ರೀ ಕೆ.ಕೃಷ್ಣಮೂರ್ತಿರವರುಗಳು ಭೇಟಿ ಮಾಡಿ ಅಭಿನಂದಿಸಿ ಶುಭ ಕೋರಿದರು. ಪ್ರಭಾರ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಆಶಾಲತಾ ಪಿ. ರವರು ಉಪಸ್ಥಿತರಿದ್ದರು.

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31th of Previous Month
License to post without prepayment
PMG BG/WPP-405/2022-2024

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ


ಸಿದ್ಧನಗೌಡ ಸಂಗನಗೌಡ ಪಾಟೀಲ
ಸಹಕಾರಿ ಪಿತಾಮಹ


ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೆಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

Printed at : Biligiri Printers
Chamrajpet, Bengaluru - 18

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ್ದು ಮಹಿಳೆಯರಿಗೆ ರಾಜ್ಯ ರಸ್ತೆ, ಸಾರಿಗೆ ನಿಗಮದ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅನುಕೂಲ ಕಲ್ಪಿಸಿಕೊಟ್ಟಿದೆ. ಅನ್ನಭಾಗ್ಯ ಯೋಜನೆ ಅಡಿಯಲ್ಲಿ ತಲಾ ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲಿಗೆ ಅನಿವಾರ್ಯ ಕಾರಣಗಳಿಂದ ಫಲಾನುಭವಿಗಳ ಖಾತೆಗೆ ಹಣ ನೇರ ವರ್ಗಾವಣೆ ಮಾಡುತ್ತಿರುವುದು, ಪ್ರತಿ ಕುಟುಂಬಕ್ಕೆ ಮಾಹೆಯಾನ 200 ಯೂನಿಟ್ ವಿದ್ಯುತ್ ಪೂರೈಕೆ ಉಚಿತ ಯೋಜನೆ ಜಾರಿಗೆ ತಂದಿದೆ.

# ರಾಜ್ಯ ಬಜೆಟ್ : ಸಮಗ್ರ ಅಭಿವೃದ್ಧಿಗೆ ಒತ್ತು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 7ರಂದು ಅಂದಾಜು 3.27 ಲಕ್ಷ ಕೋಟಿ ರೂಪಾಯಿಗಳ 2023–24ನೇ ಸಾಲಿನ ಬಜೆಟ್ ಮಂಡಿಸಿದ್ದಾರೆ. ಇದು ರಾಜ್ಯದ ಇತಿಹಾಸದಲ್ಲಿಯೇ ಬೃಹತ್ ಗಾತ್ರದ ಬಜೆಟ್ ಎನ್ನಬಹುದಾಗಿದೆ. ಸಹಕಾರ ಕ್ಷೇತ್ರ ಸೇರಿದಂತೆ ಎಲ್ಲಾ ವಲಯಗಳ ಅಭಿವೃದ್ಧಿಯ ದೂರದೃಷ್ಟಿಯುಳ್ಳ ಈ ಆಯವ್ಯಯವು ಸರ್ಕಾರ ಒಂದು ವರ್ಷದಲ್ಲಿ ಕೈಗೊಳ್ಳಬಹುದಾದ ಯೋಜನೆಗಳನ್ನು ಪ್ರತಿನಿಧಿಸುತ್ತದೆ.

ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ್ದು ಮಹಿಳೆಯರಿಗೆ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅನುಕೂಲ ಕಲ್ಪಿಸಿಕೊಟ್ಟಿದೆ. ಅನ್ನಭಾಗ್ಯ ಯೋಜನೆ ಅಡಿಯಲ್ಲಿ ತಲಾ ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲಿಗೆ ಅನಿವಾರ್ಯ ಕಾರಣಗಳಿಂದ ಫಲಾನುಭವಿಗಳ ಖಾತೆಗೆ ಹಣ ನೇರ ವರ್ಗಾವಣೆ ಮಾಡುತ್ತಿರುವುದು, ಪ್ರತಿ ಕುಟುಂಬಕ್ಕೆ ಮಾಹೆಯಾನ 200 ಯೂನಿಟ್ ವಿದ್ಯುತ್ ಪೂರೈಕೆ ಉಚಿತ ಯೋಜನೆ ಜಾರಿಗೆ ತಂದಿದೆ. ಮುಂಬರುವ ದಿನಗಳಲ್ಲಿ ಕುಟುಂಬದ ಮುಖ್ಯಸ್ಥ ಮಹಿಳೆಗೆ ಮಾಸಿಕ ಎರಡು ಸಾವಿರ ರೂ. ಹಣ ನೇರ ವರ್ಗಾವಣೆ ಹಾಗೂ ಯುವನಿಧಿ ಯೋಜನೆಗಳು ಜಾರಿಗೆ ಬರಬೇಕಿದೆ. ಈ ಯೋಜನೆಗಳು ಆರ್ಥಿಕವಾಗಿ ದುರ್ಬಲರಾಗಿರುವ ಕುಟುಂಬಗಳಿಗೆ ವರದಾನವಾಗಿದ್ದು ಸರ್ಕಾರವು ತನ್ನ ಮಾತನ್ನು ಕಾರ್ಯರೂಪಕ್ಕೆ ತರುತ್ತಿರುವುದು ಶ್ಲಾಘನೀಯ ವಿಚಾರವೂ ಆಗಿದೆ.

ಸಹಕಾರ ಇಲಾಖೆ ಮೂಲಕ ಸಹಕಾರ ಸಂಘಗಳು ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತಾಗಲು ರಾಜ್ಯದಲ್ಲಿರುವ ಸಹಕಾರ ಸಂಘಗಳ ಕಾಯ್ದೆ–1959 ಮತ್ತು ಸೌಹಾರ್ದ ಸಹಕಾರಿಯ ಕಾಯಿದೆಗಳಿಗೆ ಅಗತ್ಯ ತಿದ್ದುಪಡಿ ತಂದು ಕಾನೂನಾತ್ಮಕವಾಗಿ ಬಲಗೊಳಿಸಲು ಸಹಕಾರಿ ಮುಖಂಡರು, ಮಾಜಿ ಸಹಕಾರ ಸಚಿವರು ಹಾಗೂ ಶಾಸಕರಾದ ಲಕ್ಷಣ ಸಂಗಪ್ಪ ಸವದಿ ಅವರ ಅಧ್ಯಕ್ಷತೆಯಲ್ಲಿ ಹಿರಿಯ ಸಹಕಾರಿ ಮುಖಂಡರುಗಳು ಮತ್ತು ನಿವೃತ್ತ ಇಲಾಖೆ ಅಧಿಕಾರಿಗಳು ಹಾಗೂ ಸರ್ಕಾರದ ಹಿರಿಯ ಅಧಿಕಾರಿಗಳ ತಂಡವನ್ನು ನೇಮಕ ಮಾಡಿರುವುದು ಸ್ವಾಗತಾರ್ಹ ವಿಚಾರವಾಗಿದೆ.

ಈ ಸಮಿತಿಯು ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಸಹಕಾರ ಕ್ಷೇತ್ರದ ಸಮಗ್ರ ಬೆಳವಣಿಗೆಗೆ ಪೂರಕ ಅಧ್ಯಯನ ನಡೆಸಿ ಶೀಘ್ರವೇ ಉತ್ತಮ ವರದಿ ನೀಡಲಿ ಎಂದು ಪತ್ತಿನ ಮಹಾಮಂಡಳವು ಅಧ್ಯಯನ ಸಮಿತಿಯ ಸರ್ವ ಸದಸ್ಯರುಗಳಿಗೆ ಶುಭ ಕೋರುತ್ತದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಬಹುರಾಜ್ಯ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕ ಅಂಗೀಕಾರ

**ದೆಹಲಿ :** ಬಹುರಾಜ್ಯ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2022 ವಿಧೇಯಕ ಚರ್ಚೆಯ ನಂತರ ಲೋಕಸಭೆ ಅಂಗೀಕರಿಸಿತು. ಲೋಕಸಭೆಯಲ್ಲಿ ವಿಧೇಯಕದ ಮೇಲೆ ನಡೆದ ಚರ್ಚೆಗೆ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಉತ್ತರಿಸಿದರು. ಬಳಿಕ ಸದನ ಅಂಗೀಕಾರ ನೀಡಿತು. ಇದಕ್ಕೂ ಮೊದಲು, ಬಹು–ರಾಜ್ಯ ಸಹಕಾರಿ ಸಂಘಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಲಾಭವನ್ನು ಹೆಚ್ಚಿಸುವ ಈ ವಿಧೇಯಕಕ್ಕೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಈಗ ಲೋಕಸಭೆ ಅಂಗೀಕರಿಸುವುದರೊಂದಿಗೆ ದೇಶದ ಸಹಕಾರಿ ಚಳವಳಿಯಲ್ಲಿ ಹೊಸ ಯುಗ ಆರಂಭವಾಗಲಿದೆ.

ಮೋದಿ ಸರಕಾರ 'ಪಿಎಸಿಎಸ್'ಗಳನ್ನು ಪುನಶ್ಚೇತನಗೊಳಿಸಲು, ಅವುಗಳನ್ನು ಕಾರ್ಯಸಾಧ್ಯವಾದ ಮತ್ತು ಬಹು ಆಯಾಮದ ಸಂಸ್ಥೆಗಳನ್ನಾಗಿ ಮಾಡಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಸದಸ್ಯರ ಚುನಾವಣಾ ಪ್ರಕ್ರಿಯೆ ಸುಧಾರಣೆ, ಸಂಘದಲ್ಲಿ ಪಾರದರ್ಶಕತೆ ತರುವುದು, ಮೇಲ್ವಿಚಾರಣಾ ವ್ಯವಸ್ಥೆ ಬಲಪಡಿಸುವುದು, ವ್ಯವಹಾರ ಸುಲಭಗೊಳಿಸುವುದು ಮೊದಲಾದ ವಿಷಯಗಳಿಗೆ ವಿವರವಾದ ನಿಬಂಧನೆಗಳನ್ನು ಹೊಸ ಮಸೂದೆಯಲ್ಲಿ ಅಳವಡಿಸಲಾಗಿದೆ. ಅಲ್ಲದೇ, ಸಮಿತಿಯಲ್ಲಿ ಪ.ಜಾತಿ/ಪ.ಪಂಗಡದ ಒಬ್ಬ ವ್ಯಕ್ತಿ ಮತ್ತು ಒಬ್ಬ ಮಹಿಳೆಗೆ ಮೀಸಲು ಸೌಲಭ್ಯ ಒದಗಿಸುವ ನಿಬಂಧನೆಯನ್ನೂ ಮಸೂದೆಯಲ್ಲಿ ಸೇರಿಸಲಾಗಿದೆ. ಇದರಿಂದ ಈ ವರ್ಗಗಳ ಪ್ರಾತಿನಿಧ್ಯ ಹೆಚ್ಚಲಿದೆ.

ನ್ಯಾಯಸಮ್ಮತ ಚುನಾವಣೆ ನಡೆಸಲು, ಚುನಾವಣೆ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲು ಚುನಾವಣಾ ಪ್ರಾಧಿಕಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಪ್ರಾಧಿಕಾರ ಚುನಾವಣಾ ಆಯೋಗದಷ್ಟೇ ಶಕ್ತಿಶಾಲಿಯಾಗಲಿದೆ. ಇದರಲ್ಲಿ ಸರಕಾರದ ಹಸ್ತಕ್ಷೇಪ ಇರುವುದಿಲ್ಲ ಎಂದು ಅಮಿತ್ ಶಾ ನುಡಿದರು.

ಮಂಡಳಿಯಲ್ಲಿ 3ನೇ 1ರಷ್ಟು ಸ್ಥಾನಗಳು ಖಾಲಿಯಾದರೆ ಆ ಸ್ಥಾನಗಳಿಗೆ ಮತ್ತೆ ಚುನಾವಣೆ ನಡೆಸಲು ನಿಯಮ ರೂಪಿಸಲಾಗಿದೆ. ಮಂಡಳಿ ಸಭೆಗಳಲ್ಲಿ ಶಿಸ್ತು, ಸಹಕಾರ ಸಂಘಗಳ ಸುಗಮ ಕಾರ್ಯನಿರ್ವಹಣೆಗೆ ಅಗತ್ಯವಾದ ನಿಬಂಧನೆ ಸೇರಿಸಲಾಗಿದೆ. ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು 3 ತಿಂಗಳೊಳಗೆ ಮಂಡಳಿ ಸಭೆ ಕರೆಯಬೇಕಿರುತ್ತದೆ. ಸಹಕಾರ ಸಂಘದ ಆಡಳಿತದಲ್ಲಿ ಪಾರದರ್ಶಕತೆ ತರಲು ಷೇರುದಾರರಿಗೆ ಬಹುಮತ ನೀಡುವ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಿಸಿದರು. ಸ್ವಾತಂತ್ರ್ಯ ಬಂದಾಗಿನಿಂದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿ ಕೇಂದ್ರ ಸರಕಾರ ಪ್ರಾಮುಖ್ಯತೆ ನೀಡಬೇಕು, ಪ್ರತ್ಯೇಕ ಸಹಕಾರ ಸಚಿವಾಲಯ ರಚಿಸಬೇಕು ಎಂದು ಜನತೆ ಬಯಸಿದ್ದರು. ದಶಕಗಳ ಬೇಡಿಕೆ ಈಡೇರಿಸಲು ಪ್ರಧಾನಿ ಮೋದಿ ಪ್ರತ್ಯೇಕ ಸಹಕಾರ ಸಚಿವಾಲಯವನ್ನೇ ರಚಿಸಿದರು ಎಂದು ಶಾ ಸದನದ ಗಮನ ಸೆಳೆದರು.

**ಸುಭಾಷಿತ :** ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರಗಳ ತಂತಿಯ ಮಾಡಯ್ಯ, ಬತ್ತೀಸ ರಾಗವ ಹಾಡಯ್ಯ, ಉರದಲೊತ್ತಿ ಬಾರಿಸು ಕೂಡಲ ಸಂಗಮದೇವ! – ಬಸವಣ್ಣ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಓ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# 17ನೇ ರಾಷ್ಟ್ರೀಯ ಸಹಕಾರ ಸಮ್ಮೇಳನ
# ಸಹಕಾರ ಕ್ಷೇತ್ರದಿಂದ ರೈತ ಸಮುದಾಯದ ಅಭ್ಯುದಯ
# ಸಹಕಾರಾಭಿವೃದ್ಧಿಯ ಬಗ್ಗೆ ಪ್ರಶಂಸೆ
## ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ




**ನವದೆಹಲಿ :** ರೈತ ಸಮುದಾಯದ ಅಭಿವೃದ್ಧಿಯಲ್ಲಿ ಸಹಕಾರ ರಂಗ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಅವರು ಜುಲೈ 1 ರಂದು ದೆಹಲಿಯ ಪ್ರಗತಿ ಮೈದಾನದಲ್ಲಿ "ಅಮೃತ ಕಾಲ – ಸಹಕಾರದ ಮೂಲಕ ದೇಶದ ಸಮೃದ್ಧಿ" ಎಂಬ ಘೋಷವಾಕ್ಯದೊಂದಿಗೆ ಭಾರತೀಯ ಸಹಕಾರಿ ಒಕ್ಕೂಟ ಏರ್ಪಡಿಸಿದ್ದ 17ನೇ ರಾಷ್ಟ್ರೀಯ ಸಹಕಾರ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುಂದುವರೆದು ಮಾತನಾಡಿದ ಪ್ರಧಾನಿ ಅವರು, ಸಹಕಾರ ವಲಯದ ಬೆಳವಣಿಗೆಗೆ ಹಾಗೂ ರೈತ ಸಮುದಾಯದ ಅಭ್ಯುದಯಕ್ಕೆ ಸಹಕಾರ ವಲಯ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಮೂಲಕ ಸಹಕಾರ ವಲಯದ ಯಶಸ್ಸಿಗೆ ಕಾರಣವಾಗಲಿದೆ. ಸಹಕಾರ ವಲಯದಲ್ಲಿ ಎಲ್ಲರ ಒಳಗೊಳ್ಳುವಿಕೆಯಿಂದ ಈ ವಲಯದ ಸುಧಾರಣೆಗೆ ಮತ್ತು ದೇಶದ ಆರ್ಥಿಕ ಬೆಳವಣಿಗೆಗೂ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಕೇಂದ್ರದಲ್ಲಿ ಸಹಕಾರ ಸಚಿವಾಲಯ ಪ್ರಾರಂಭವಾಗಿ ಎರಡು ವರ್ಷಗಳಲ್ಲಿ ಮಹತ್ತರ ಬದಲಾವಣೆಗಳನ್ನು ತರಲಾಗಿದೆ. ಪ್ರಮುಖವಾಗಿ ಪ್ಯಾಕ್ಸ್‌ಗಳನ್ನು ಸಧೃಡಗೊಳಿಸುವುದು ಹಾಗೂ 2 ಲಕ್ಷ ಹೊಸ ಪ್ಯಾಕ್ಸ್‌ಗಳನ್ನು ತೆರೆಯುವುದು ಸಚಿವಾಲಯದ ಗುರಿಯಾಗಿದೆ. ಜೊತೆಗೆ ಪ್ಯಾಕ್ಸ್‌ನ ಗಣಕೀಕರಣ ಕಾರ್ಯವು ಪ್ರಗತಿಯಲ್ಲಿದೆ. ಇವರೆಗೆ ಸುಮಾರು ಅಂದಾಜು 23000 ಸಂಘಗಳ ಗಣಕೀಕರಣವು ನಡೆದಿದ್ದು ಇನ್ನೂ ಬಾಕಿಯ ಕಾರ್ಯವು ತ್ವರಿತ ಗತಿಯಲ್ಲಿ ನಡೆಯುತ್ತಿದೆ. ಸರ್ಕಾರದಲ್ಲಿ ಸಹಕಾರ ಇಲಾಖೆಯ ಕಾರ್ಯದಲ್ಲಿ ಹೊಸ ಸಹಕಾರ ಕರಡು ತಯಾರಿಯಾಗಿ ಸಧ್ಯದಲ್ಲಿಯೇ ಪ್ರತಿಯನ್ನು ಸಾರ್ವಜನಿಕ ಕ್ಷೇತ್ರಕ್ಕೆ ಬಿಡುಗಡೆಗೊಳ್ಳಲಿದೆ. ಡೈರಿ ಉತ್ಪಾದನೆಗೆ ಹೆಚ್ಚು ಮಹತ್ವಕೊಟ್ಟಿದ್ದು ತಾಂತ್ರಿಕ ಗುಣ ಮಟ್ಟವನ್ನು ಕಾಪಾಡಿಕೊಳ್ಳಲು ಅನೇಕ ಯೋಜನೆಗಳನ್ನು ರೂಪಿಸಿರುತ್ತದೆ.



## 2023-24ನೇ ಬಜೆಟ್ ಗಾತ್ರ ರೂ. 3 ಲಕ್ಷ 27 ಸಾವಿರ ಕೋಟಿ

## ಕೃಷಿ ಭಾಗ್ಯ ಯೋಜನೆ ಮರುಜಾರಿ : ನೀರಾವರಿ, ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ

## ಮಹಿಳಾ ಸಹಕಾರ ಸಂಘಗಳಿಗೆ ಪ್ರೋತ್ಸಾಹ : ಹೈಟೆಕ್ ಮಾರುಕಟ್ಟೆ ಅಭಿವೃದ್ಧಿ

## ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 14ನೇ ದಾಖಲೆಯ ಬಜೆಟ್

**ಕರ್ನಾಟಕ ರಾಜ್ಯದ ಬಜೆಟ್ ಮಂಡನೆಯಲ್ಲಿ ತಮ್ಮದೇ ದಾಖಲೆಯನ್ನು ಸೃಷ್ಟಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಸ್ತುತ 2023–2024ನೇ ಸಾಲಿನ 14ನೇ ಬಜೆಟ್ ಮಂಡನೆ ಮಾಡಿದ್ದಾರೆ. ಅವರು ಮಂಡಿಸಿರುವ ಬಜೆಟ್ ಮುಖ್ಯಾಂಶಗಳು ಹೀಗಿವೆ**






### 2023–24ನೇ ಸಾಲಿನ ಬಜೆಟ್‌ನಲ್ಲಿ ಅನುದಾನ ಹಂಚಿಕೆ ವಿವರ

- ಶಿಕ್ಷಣ ಕ್ಷೇತ್ರ – ರೂ. 37 ಸಾವಿರ ಕೋಟಿ (ಶೇ.11)
- ಮಹಿಳಾ ಮತ್ತು ಮಕ್ಕಳ ಕಲ್ಯಾಣ – ರೂ.24 ಸಾವಿರ ಕೋಟಿ (ಶೇ.7)
- ಇಂಧನ – ರೂ. 22ಸಾವಿರ ಕೋಟಿ (ಶೇ.7)
- ನೀರಾವರಿ – ರೂ. 19ಸಾವಿರ ಕೋಟಿ (ಶೇ.6)
- ಗ್ರಾಮೀಣಾಭಿವೃದ್ಧಿ – ರೂ. 18 ಸಾವಿರ ಕೋಟಿ (ಶೇ.5)
- ಒಳಾಡಳಿತ ಮತ್ತು ಸಾರಿಗೆ – ರೂ. 16 ಸಾವಿರ ಕೋಟಿ (ಶೇ.5)
- ಕಂದಾಯ – ರೂ. 16ಸಾವಿರ ಕೋಟಿ (ಶೇ.5)
- ಆರೋಗ್ಯ ಇಲಾಖೆ – ರೂ. 14 ಸಾವಿರ ಕೋಟಿ (ಶೇ.4)
- ಸಮಾಜ ಕಲ್ಯಾಣ – ರೂ. 111 ಸಾವಿರ ಕೋಟಿ (ಶೇ.3)
- ಲೋಕೋಪಯೋಗಿ ಇಲಾಖೆ – ರೂ. 10 ಸಾವಿರ ಕೋಟಿ (ಶೇ.3)
- ಕೃಷಿ ಮತ್ತು ತೋಟಗಾರಿಕೆ – ರೂ. 5860 ಕೋಟಿ (ಶೇ.2)
- ಪಶುಸಂಗೋಪನೆ ಮತ್ತು ಮೀನುಗಾರಿಕೆ – ರೂ. 3024 ಕೋಟಿ (ಶೇ.1)
- ಇತರೆ – ರೂ. 1.09 ಲಕ್ಷ ಕೋಟಿ (ಶೇ.32)



**ಸಹಕಾರ :** ರಾಜ್ಯದ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡುತ್ತಿರುವ ಅಲ್ಪಾವಧಿ ಸಾಲದ ಮಿತಿಯನ್ನು ಮೂರು ಲಕ್ಷ ರೂ. ಗಳಿಂದ ಐದು ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು. ಅದೇ ರೀತಿ ಶೇ. 3 ರ ಬಡ್ಡಿದರದಲ್ಲಿ ನೀಡುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮಿತಿಯನ್ನು 10 ಲಕ್ಷ ರೂ.ಗಳಿಂದ 15 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು. ಪ್ರಸಕ್ತ ಸಾಲಿನಲ್ಲಿ 35 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ 25,000 ಕೋಟಿ ರೂ.ಗಳಷ್ಟು ಸಾಲ ವಿತರಣೆ ಮಾಡುವ ಗುರಿ ಹೊಂದಲಾಗಿದೆ.

ರೈತರು ತಮ್ಮ ಹಾಗೂ ತಮ್ಮ ನೆರೆಹೊರೆಯ ರೈತರ ಉತ್ಪನ್ನಗಳನ್ನು ಸಂಗ್ರಹಿಸಲು ಅನುವಾಗುವಂತೆ ಗೋದಾಮು ನಿರ್ಮಿಸಲು ಬ್ಯಾಂಕುಗಳು ನೀಡುವ 20 ಲಕ್ಷ ರೂ. ವರೆಗಿನ ಸಾಲಕ್ಕೆ ರಾಜ್ಯ ಸರ್ಕಾರವು ಶೇ. 7 ರಷ್ಟು ಬಡ್ಡಿ ಸಹಾಯಧನ ನೀಡಲಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣಿಕೆಗಾಗಿ ನಾಲ್ಕು ಚಕ್ರದ ಪಿಕ್‌ಅಪ್ ವ್ಯಾನ್ (Pick-up Van) ಖರೀದಿಸಲು ಏಳು ಲಕ್ಷ ರೂ. ವರೆಗಿನ ಸಾಲವನ್ನು ಶೇ. 4ರ ಬಡ್ಡಿ ದರದಲ್ಲಿ ವಿತರಿಸಲಾಗುವುದು. 'ಕಾಯಕ ನಿಧಿ' ಯೋಜನೆಯಡಿ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಮಾಲರು ಮರಣ ಹೊಂದಿದಲ್ಲಿ ಅವರ ಶವಸಂಸ್ಕಾರಕ್ಕಾಗಿ ನೀಡುವ ಮೊತ್ತವನ್ನು 10,000 ರೂ. ಗಳಿಂದ 25,000 ರೂ. ಗಳಿಗೆ ಹೆಚ್ಚಿಸಲಾಗುವುದು. ಮಹಿಳಾ ಸಹಕಾರಿ ಸ್ವಸಹಾಯ ಸಂಘಗಳಿಗೆ 'ಉದ್ಯಮ ಶಕ್ತಿ' ಯೋಜನೆಯಡಿ 100 ಪೆಟ್ರೋಲ್ ಬಂಕ್‌ಗಳ ಸ್ಥಾಪನೆಗೆ ಕ್ರಮ. ರಾಜ್ಯದಲ್ಲಿರುವ 'ಸಿ' ವರ್ಗದ 121 ಮುಜರಾಯಿ ದೇವಸ್ಥಾನಗಳಿಗೆ ರೂ. 15 ಸಾವಿರ ಸಹಾಯಧನ.



**ರೇಷ್ಮೆ :** ರಾಮನಗರ ಮತ್ತು ಶಿಡ್ಲಘಟ್ಟದ ರೇಷ್ಮೆಗೂಡಿನ ಮಾರುಕಟ್ಟೆಗಳಲ್ಲಿ ಏಶಿಯಾದಲ್ಲಿಯೇ ಅತಿ ಹೆಚ್ಚಿನ ವಹಿವಾಟು ನಡೆಯುತ್ತದೆ.

ರಾಮನಗರ ಜಿಲ್ಲೆಯಲ್ಲಿ 75 ಕೋಟಿ ರೂ. ವೆಚ್ಚದಲ್ಲಿ ಅತಿದೊಡ್ಡ ಹೈಟೆಕ್ ಮಾರುಕಟ್ಟೆಯನ್ನು ನಿರ್ಮಿಸಲಾಗುತ್ತಿದ್ದು, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಸುತ್ತ ಮುತ್ತಲಿನ ರೈತರಿಗೆ ಅನುಕೂಲವಾಗುವಂತೆ ಶಿಡ್ಲಘಟ್ಟದಲ್ಲಿನ ಮಾರುಕಟ್ಟೆಯನ್ನು 75 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಗೂಡು ಮಾರುಕಟ್ಟೆಯಾಗಿ ಅಭಿವೃದ್ಧಿಪಡಿಸಲಾಗುವುದು.



**ಪಶುಸಂಗೋಪನೆ :** ಜಾನುವಾರುಗಳ ಆಕಸ್ಮಿಕ ಸಾವಿನ ಸಂದರ್ಭದಲ್ಲಿ ರೈತರು ಅನುಭವಿಸುವ ಸಂಕಷ್ಟ ನಿವಾರಣೆಗೆ 'ಅನುಗ್ರಹ' ಯೋಜನೆ ಸರ್ಕಾರದ ಹಿಂದಿನ ಅವಧಿಯಲ್ಲಿ ಜಾನುವಾರುಗಳ ಆಕಸ್ಮಿಕ ಸಾವಿನ ಸಂದರ್ಭದಲ್ಲಿ ರೈತರು ಅನುಭವಿಸುವ ಸಂಕಷ್ಟ ನಿವಾರಣೆಗೆ 'ಅನುಗ್ರಹ' ಯೋಜನೆಯನ್ನು ಪ್ರಾರಂಭಿಸಲಾಗಿತ್ತು. ಈ ಯೋಜನೆಯನ್ನು ಪುನರ್‌ಸ್ಥಾಪಿಸಿ ಕುರಿ ಮತ್ತು ಮೇಕೆಗಳಿಗೆ 5,000 ರೂ. ಹಾಗೂ ಹಸು, ಎಮ್ಮೆ ಮತ್ತು ಎತ್ತುಗಳಿಗೆ 10,000 ರೂ. ಪರಿಹಾರ ಒದಗಿಸಲಾಗುವುದು ಎಂದು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ.

'ಗೋವಿನಿಂದ ಗ್ರಾಹಕರವರೆಗೆ ಗುಣಮಟ್ಟದ ಶ್ರೇಷ್ಠತೆ' ಎಂಬ ಧ್ಯೇಯವಾಕ್ಯ ಹೊಂದಿರುವ 'ನಂದಿನಿ'ಯು ಕೋಟ್ಯಾಂತರ ಜನರ ಬದುಕಿಗೆ ಆಸರೆಯಾಗಿದೆ. ನಂದಿನಿ ಬ್ರಾಂಡ್ ಕನ್ನಡಿಗರೊಂದಿಗೆ ಭಾವನಾತ್ಮಕ ಬೆಸುಗೆಯನ್ನು ಹೊಂದಿದ್ದು, ಇದನ್ನು ಉಳಿಸಿ ಇನ್ನಷ್ಟು ಬೆಳೆಸಲು ನಮ್ಮ ಸರ್ಕಾರ ಬದ್ಧವಾಗಿದೆ.



**ಮೀನುಗಾರಿಕೆ :** ಮೀನುಗಾರ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಹಾಗೂ ವಹಿವಾಟು ವಿಸ್ತರಣೆಗೆ ನೆರವಾಗಲು ಬ್ಯಾಂಕುಗಳಲ್ಲಿ ಬಡ್ಡಿರಹಿತವಾಗಿ ನೀಡುವ ಸಾಲದ ಮಿತಿಯನ್ನು 50,000 ರೂ. ಗಳಿಂದ ಮೂರು ಲಕ್ಷ ರೂ. ಗಳಿಗೆ ಹೆಚ್ಚಿಸಲಾಗುವುದು.

# ಸಹಕಾರ ಸಂಘಗಳ ಕಾಯಿದೆ ಮತ್ತು ಕಾನೂನಿನ ತಿದ್ದುಪಡಿ ಶಿಫಾರಸ್ಸಿಗೆ ಸಲಹಾ ಸಮಿತಿ : ಸಮಿತಿಯ ಅಧ್ಯಕ್ಷರಾಗಿ ಶಾಸಕ ಲಕ್ಷ್ಮಣ ಸವದಿ

**ಬೆಂಗಳೂರು : ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ಸಂಘಗಳ ಕಾಯ್ದೆ 1997 ಮತ್ತು ನಿಯಮಗಳು 2004 ಈ ಎರಡು ಕಾಯ್ದೆಗಳಿಗೂ ಪ್ರಸ್ತುತ ಇರುವ ಪರಿಸ್ಥಿತಿಗನುಗುಣವಾಗಿ ಕಾನೂನಾತ್ಮಕ ತಿದ್ದುಪಡಿ ತರುವ ಸಂಬಂಧ ಸಮಿತಿಯೊಂದನ್ನು ರಚಿಸಿ ಸರ್ಕಾರ ಸುತ್ತೋಲೆ ಹೊರಡಿಸಿದೆ.**

ಇತ್ತೀಚಿನ ದಿನಗಳಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳಲ್ಲಿ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಅನೇಕ ಹಣ ದುರುಪಯೋಗದ ಹಗರಣಗಳು ಬೆಳಕಿಗೆ ಬರುತ್ತಿದ್ದು, ಈ ಹಣ ದುರುಪಯೋಗವಾದ ಸಂಘಗಳಲ್ಲಿ ಠೇವಣಿ ಹೂಡಿಕೆ ಮಾಡಿದ ಠೇವಣಿದಾರರಿಗೆ ವಂಚನೆಯಾಗುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಅಲ್ಲದೆ, ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿಯೂ ಸಹ ಜ್ಯೇಷ್ಠತಾ ಪಟ್ಟಿಯನ್ನು ಸರಿಯಾಗಿ ಪಾಲನೆ ಮಾಡದೆ ಹಿರಿಯ ಸದಸ್ಯರನ್ನು ಕಡೆಗಣಿಸಿ, ಆಡಳಿತ ಮಂಡಳಿಯವರು ಕಾನೂನುಬಾಹಿರವಾಗಿ ನಿವೇಶನಗಳನ್ನು ಹಂಚಿಕೆ ಮಾಡುತ್ತಿದ್ದು ಹಾಗೂ ಸಂಘದ ಹಣವನ್ನು ದುರ್ಬಳಕೆ ಮಾಡಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ ಕ್ರಮಕೈಗೊಳ್ಳಲು ಸರ್ಕಾರಕ್ಕೆ ದೂರುಗಳು ಸ್ವೀಕೃತವಾಗುತ್ತಿರುತ್ತವೆ. ಈ ಅಂಶಗಳ ಹಿನ್ನೆಲೆಯಲ್ಲಿ ಸಹಕಾರ ಕಾಯಿದೆ ಹಾಗೂ ಕಾನೂನಿನಲ್ಲಿ ಸೂಕ್ತ ಬದಲಾವಣೆ ತರಬೇಕಾಗಿರುತ್ತದೆ ತಿಳಿಸಲಾಗಿದೆ.

ಈಗಿರುವ ಸಹಕಾರ ಕಾಯಿದೆ ಹಾಗೂ ಕಾನೂನಿಗೆ ತಿದ್ದುಪಡಿ ತರುವ ಸಂಬಂಧ ಅಧ್ಯಯನ ನಡೆಸಿ, ವರದಿಯನ್ನು ಸಲ್ಲಿಸಲು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನ ಮತ್ತು ಅನುಭವವುಳ್ಳ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

- **ಶ್ರೀ ಲಕ್ಷ್ಮಣ ಸಂಗಪ್ಪ ಸವದಿ,** ಮಾನ್ಯ ಶಾಸಕರು, ಅಥಣಿ ವಿಧಾನಸಭಾ ಕ್ಷೇತ್ರ, ಬೆಳಗಾವಿ ಜಿಲ್ಲೆ – ಸಮಿತಿ ಅಧ್ಯಕ್ಷರು
- **ಶ್ರೀ ಜಿ.ಟಿ. ದೇವೇಗೌಡ,** ಮಾನ್ಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ, ಮೈಸೂರು ಜಿಲ್ಲೆ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು – ಸಮಿತಿ ಸದಸ್ಯರು
- **ಶ್ರೀ ಎಸ್.ಆರ್. ಪಾಟೀಲ್,** ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಅಧ್ಯಕ್ಷರು, ಬೀಳಗಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೀಳಗಿ, ಬಾಗಲಕೋಟೆ ಜಿಲ್ಲೆ – ಸಮಿತಿ ಸದಸ್ಯರು



- **ಶ್ರೀ ಅರೆಬೈಲ್ ಶಿವರಾಮ್ ಹೆಬ್ಬಾರ್,** ಮಾನ್ಯ ಶಾಸಕರು, ಯಲ್ಲಾಪುರ ವಿಧಾನಸಭಾ ಕ್ಷೇತ್ರ, ಉತ್ತರ ಕನ್ನಡ ಜಿಲ್ಲೆ – ಸಮಿತಿ ಸದಸ್ಯರು
- **ಶ್ರೀ ಕೆ. ಷಡಕ್ಷರಿ,** ಮಾನ್ಯ ಶಾಸಕರು, ತಿಪಟೂರು ವಿಧಾನಸಭಾ ಕ್ಷೇತ್ರ, ತುಮಕೂರು ಜಿಲ್ಲೆ – ಸಮಿತಿ ಸದಸ್ಯರು
- **ಶ್ರೀ ಎಂ.ಎನ್. ರಾಜೇಂದ್ರಕುಮಾರ್,** ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು ಹಾಗೂ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ದಕ್ಷಿಣಕನ್ನಡ ಜಿಲ್ಲೆ – ಸಮಿತಿ ಸದಸ್ಯರು
- **ಶ್ರೀ ರಾಜೇಂದ್ರ ರಾಜಣ್ಣ,** ಮಾನ್ಯ ವಿಧಾನ ಪರಿಷತ್ ಸದಸ್ಯರು, ತುಮಕೂರು ಜಿಲ್ಲೆ – ಸಮಿತಿ ಸದಸ್ಯರು
- **ಶ್ರೀ ಜಿ.ಎಸ್. ರಮಣರೆಡ್ಡಿ,** ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) – ಸಮಿತಿ ಸದಸ್ಯರು
- **ಶ್ರೀ ಹೆಚ್.ಎಸ್. ನಾಗರಾಜಯ್ಯ,** ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) – ಸಮಿತಿ ಸದಸ್ಯರು
- **ಶ್ರೀ ಎ.ಸಿ. ದಿವಾಕರ್,** ಸಹಕಾರ ಸಂಘಗಳ ಅಪರ ನಿಬಂಧಕರು (ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ) – ಸದಸ್ಯ ಕಾರ್ಯದರ್ಶಿ

ಅಧ್ಯಯನ ಸಮಿತಿಯು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕ ವಾಗುವಂತೆ ಕಾಲಕಾಲಕ್ಕೆ ಸಭೆಗಳನ್ನು ನಡೆಸಿ, ಅವಶ್ಯವಿದ್ದಲ್ಲಿ ಹೊರ ರಾಜ್ಯದ ಸಹಕಾರ ಕ್ಷೇತ್ರದ ಕಾಯ್ದೆ ಮತ್ತು ಕಾನೂನುಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

## ಸಹಕಾರ ಕಾಯಿದೆ ಮತ್ತು ಕಾನೂನು ತಿದ್ದುಪಡಿ ಅಧ್ಯಯನ ಸಮಿತಿ ಸಭೆ

# ಸಹಕಾರ ಚಳವಳಿ ಜನಾಂದೋಲನವಾಗಬೇಕು : ಸಚಿವ ಕೆ.ಎನ್. ರಾಜಣ್ಣ



**ಬೆಂಗಳೂರು** : ಸಹಕಾರ ಚಳವಳಿಗೆ ಅಮೂಲಾಗ್ರ ಬದಲಾವಣೆಗಳನ್ನು ತರುವ ಮೂಲಕ ಸಹಕಾರ ಆಂದೋಲನ ಜನರ ಆಂದೋಲನವಾಗುವಂತೆ ಮಾಡಬೇಕು. ಸಹಕಾರ ಸಂಸ್ಥೆಗಳಲ್ಲಿ ಕಂಡುಬರುವ ಲೋಪದೋಷಗಳನ್ನು ತಡೆಗಟ್ಟಲು ಹಾಗೂ ಸಹಕಾರ ಕಾಯಿದೆ ಮತ್ತು ಸೌಹಾರ್ದ ಸಹಕಾರ ಕಾಯಿದೆಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಪರಿಣಾಮಕಾರಿ ನಿರ್ವಹಣೆಯ ದೃಷ್ಟಿಯಿಂದ ಅಧ್ಯಯನ ಸಮಿತಿಯನ್ನು ರಚಿಸಲಾಗಿದೆ. ಇದಕ್ಕೆ ಸಹಕಾರ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿರುವ ಹಿರಿಯ ಸಹಕಾರಿಗಳು ಸಹಕಾರ ನೀಡಬೇಕೆಂದು ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ತಿಳಿಸಿದರು.

ದಿನಾಂಕ : 19.7.2023 ರಂದು ವಿಧಾನಸೌಧದಲ್ಲಿ ನಡೆದ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆ 1997 ಮತ್ತು ನಿಯಮಗಳು 2004 ಇವುಗಳಿಗೆ ಕಾನೂನಾತ್ಮಕ ತಿದ್ದುಪಡಿ ತರುವ ಸಂಬಂಧ ರಚಿಸಿರುವ ಅಧ್ಯಯನ ಸಮಿತಿಯ ಮೊದಲನೇ ಸಭೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಶಾಸಕರು ಹಾಗೂ ಸಹಕಾರ ಕಾಯಿದೆ ಮತ್ತು ಕಾನೂನು ತಿದ್ದುಪಡಿ ಅಧ್ಯಯನ ಸಮಿತಿ ಅಧ್ಯಕ್ಷರಾದ ಲಕ್ಷ್ಮಣ ಸವದಿ ಮಾತನಾಡಿ, ಸಹಕಾರ ಚಳವಳಿಯ ಬೆಳವಣಿಗೆಗೆ ಶಕ್ತಿ ನೀಡಲು ಸಹಕಾರ ಕಾಯಿದೆ ಮತ್ತು ಕಾನೂನು ತಿದ್ದುಪಡಿಯ ರಚನಾ ಸಮಿತಿಯು ಪೂರಕವಾಗಬೇಕು. ಈ ಸಮಿತಿಯ ರಚನೆಯ ಮೂಲಕ ಸಹಕಾರ ಚಳವಳಿಯಲ್ಲಿ ಪಾರದರ್ಶಕ ಆಡಳಿತಕ್ಕೆ ವ್ಯವಸ್ಥೆ ಮಾಡಿ ಸಹಕಾರ ಚಳವಳಿಯ ಕುರಿತು ಜನರಲ್ಲಿ ವಿಶ್ವಾಸವನ್ನು ಮೂಡಿಸುವ ಕೆಲಸ ಆಗಬೇಕಾಗಿದೆ. ಇದಕ್ಕಾಗಿ ಅಧ್ಯಯನ ಸಮಿತಿಯಲ್ಲಿ ಇರುವ ನಾವೆಲ್ಲರೂ ಪ್ರಾಮಾಣಿಕ ಸೇವೆಯನ್ನು ನಿರ್ವಹಿಸೋಣ ಎಂದರು.

ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರು ಮಾತನಾಡಿ, ವಿವಿಧ ರಾಜ್ಯಗಳ ಸಹಕಾರ ಕಾಯಿದೆ ಕಾನೂನುಗಳನ್ನು ಕುರಿತು ಅಧ್ಯಯನ ಮಾಡಿ ಅವುಗಳಲ್ಲಿ ಇರುವ ಉತ್ತಮ ಅಂಶಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ರಾಜ್ಯದ ಸಹಕಾರ ಕಾಯಿದೆ ಕಾನೂನನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ. ಇದಕ್ಕೆ ಮಹಾಮಂಡಳ ಅಗತ್ಯವಿರುವ ಎಲ್ಲಾ ಸಹಕಾರವನ್ನು ನೀಡಲು ಸಿದ್ಧವಿದೆ ಎಂದರು. ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಬೀಳಗಿ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾದ ಎಸ್.ಆರ್. ಪಾಟೀಲ್ ಹಾಗೂ ಶಾಸಕರಾದ ಅರೆಬೈಲ್ ಶಿವರಾಮ್ ಹೆಬ್ಬಾರ್ ರವರುಗಳು ಮಾತನಾಡಿ, ಸಹಕಾರ ಕಾಯಿದೆ ಕಾನೂನಿನಲ್ಲಿ ಅಳವಡಿಸಿಕೊಳ್ಳಬೇಕಾದ ಅಂಶಗಳ ಕುರಿತು ಸಲಹೆ ನೀಡಿದರು.

ಸಭೆಯಲ್ಲಿ ಶಾಸಕರಾದ ಕೆ. ಷಡಕ್ಷರಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಎಂ.ಎನ್. ರಾಜೇಂದ್ರ ಕುಮಾರ್, ವಿಧಾನ ಪರಿಷತ್ ಸದಸ್ಯರಾದ ರಾಜೇಂದ್ರ ರಾಜಣ್ಣ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಜಿ.ಎಸ್. ರಮಣರೆಡ್ಡಿ, ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ, ಸಹಕಾರ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಎಂ.ಡಿ. ನರಸಿಂಹಮೂರ್ತಿ, ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ ಎ.ಸಿ. ದಿವಾಕರ್, ಅಪರ ನಿಬಂಧಕರಾದ ಕೆ.ಎಂ. ಆಶಾ, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್, ಕಾರ್ಯದರ್ಶಿ ಲಕ್ಷ್ಮೀಪತಯ್ಯ ಮತ್ತಿತರರು ಉಪಸ್ಥಿತರಿದ್ದರು.



# ಸಹಕಾರ ಇಲಾಖೆಯ ಬೆಂಗಳೂರು ವಿಭಾಗದ ಪ್ರಗತಿ ಪರಿಶೀಲನಾ ಸಭೆ

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವ್ಯಾಪಾರ ಅಭಿವೃದ್ಧಿ ಯೋಜನೆಗಳಿಗೆ ಆದ್ಯತೆ ನೀಡಲು ಸಹಕಾರ ಸಚಿವ ಕೆ.ಎನ್. ರಾಜಣ್ಣ ಸಲಹೆ




**ಬೆಂಗಳೂರು :** ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಆದ್ಯತೆ ನೀಡಿ ಸಂಘಗಳ ಬಲವರ್ಧನೆಗೆ ಪೂರಕವಾದ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಳ್ಳುವಂತೆ ಮಾಡಲು ಇಲಾಖೆಯ ಅಧಿಕಾರಿಗಳು ಉತ್ತಮ ಮಾರ್ಗದರ್ಶನ ನೀಡಬೇಕು ಎಂದು ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಸಲಹೆ ಮಾಡಿದರು. ಅವರು ದಿನಾಂಕ : 27.7.2023 ರಂದು ಬೆಂಗಳೂರಿನ "ಸಹಕಾರ ಸೌಧ" ಕಛೇರಿಯಲ್ಲಿ ಏರ್ಪಡಿಸಲಾಗಿದ್ದ ಬೆಂಗಳೂರು ವಿಭಾಗದ ಇಲಾಖಾ ಅಧಿಕಾರಿಗಳ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಪತ್ತಿನ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಸಾಲ ವಸೂಲಾತಿ ಮಾಡುವಾಗ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಯಾವುದೇ ರೀತಿಯ ಲೋಪದೋಷಗಳು ಕಂಡುಬರದಂತೆ ಸಂಸ್ಥೆಗಳು ಕಾರ್ಯನಿರ್ವಹಿಸಲು ಇಲಾಖಾಧಿಕಾರಿಗಳು ಕ್ರಮವಹಿಸಿ. ಇದರಿಂದಾಗಿ ಸಂಸ್ಥೆಗಳಲ್ಲಿ ಉಂಟಾಗುವ ಆಡಳಿತಾತ್ಮಕ ದೋಷಗಳಿಗೆ ಅವಕಾಶ ಇರುವುದಿಲ್ಲ ಎಂದು ಅವರು ತಿಳಿಸಿದರು.

ಜೊತೆಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ತಮ್ಮ ಸ್ವಂತ ಬಂಡವಾಳವನ್ನು ಕೃಷಿಯೇತರ ಅಗತ್ಯಗಳಿಗೆ ವಿನಿಯೋಗಿಸಿದರೆ ಸಂಸ್ಥೆಗಳು ಸದೃಢವಾಗಿ ಬೆಳವಣಿಗೆ ಹೊಂದಲು ಸಾಧ್ಯವಿದೆ.

ಈ ಕುರಿತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿನ ಅಧಿಕಾರಿಗಳು ಪೂರಕ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿದರು. ಹಾಗೆಯೇ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಪತ್ತಿನ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ಇಂತಿಷ್ಟು ಹಣವನ್ನು ಠೇವಣಿ ಇಡುವಂತೆ ಸದ್ಯದಲ್ಲಿಯೇ ಸುತ್ತೋಲೆಯನ್ನು ಹೊರಡಿಸುವಂತೆ ಸಹಕಾರ ಸಂಘಗಳ ನಿಬಂಧಕರಿಗೆ ಸೂಚಿಸಿದರು.

ಸಭೆಯಲ್ಲಿ ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಅವರು ಮಾತನಾಡಿ, ಡಿಸಿಸಿ ಬ್ಯಾಂಕುಗಳಲ್ಲಿ ಪತ್ತಿನ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ಠೇವಣಿ ಇಡುವುದು ಸೇರಿದಂತೆ ಇನ್ನಿತರ ವಿಷಯಗಳ ಕಾನೂನು ತಿದ್ದುಪಡಿ ಕುರಿತಂತೆ ಕೇಂದ್ರ ಕಚೇರಿಯಲ್ಲಿರುವ ಇಲಾಖೆಯ ಅಧಿಕಾರಿಗಳು ಒಂದು ಸಭೆ ನಡೆಸಿ ಸದ್ಯದಲ್ಲಿಯೇ ಕಾನೂನು ತಿದ್ದುಪಡಿ ಸಮಿತಿಗೆ ನೀಡುವುದಾಗಿ ತಿಳಿಸಿದರು.

ಸಭೆಯಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರುಗಳಾದ ಪ್ರಕಾಶರಾವ್, ಕೆ.ಎಂ. ಆಶಾ, ಹೆಚ್. ಬಾಲಶೇಖರ್, ಲಿಂಗರಾಜು, ಜಂಟಿ ನಿಬಂಧಕರುಗಳಾದ ಅಶ್ವಥ್‌ನಾರಾಯಣ, ಕಲ್ಲಪ್ಪ ಓಬಣ್ಣಗೋಳ, ಜಯಪ್ರಕಾಶ್, ಪಿ. ಮಹೇಶ್, ನೀಲಪ್ಪ ಸಿದ್ದಣ್ಣವರ ಸೇರಿದಂತೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



## ಹತ್ತು ಶಾಖೆಗಳು - ಸದಸ್ಯರೊಂದಿಗೆ ಉತ್ತಮ ಬಾಂಧವ್ಯ

# ಪ್ರಗತಿ ಪಥದಲ್ಲಿ ಬೆಳಗಾವಿ ಜಿಲ್ಲೆಯ ಶ್ರೀ ಮಹಾಲಕ್ಷ್ಮೀ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸೈಟಿ ಲಿ., ಮೂಡಲಗಿ

ಪರಸ್ಪರ ಸಹಕಾರ ಮತ್ತು ಸಹಬಾಳ್ವೆಯ ತತ್ವದ ಮೇಲೆ ರೂಪಗೊಂಡಿರುವ ಸಹಕಾರ ಕ್ಷೇತ್ರ ದೇಶದ ಆರ್ಥಿಕ ವಲಯಕ್ಕೆ ಅಪಾರ ಕೊಡುಗೆಯನ್ನು ನೀಡುತ್ತಾ ಬಂದಿದೆ. 'ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ' ಎನ್ನುತ್ತ ದೇಶಾದ್ಯಂತ ಸಹಕಾರ ಸಂಘ–ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆರ್ಥಿಕವಾಗಿ ಹಿಂದುಳಿದ ಜನಸಾಮಾನ್ಯರಿಗೆ ಆರ್ಥಿಕ ಚೈತನ್ಯ ತುಂಬುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿವೆ.

ನಮ್ಮ ರಾಜ್ಯದಲ್ಲಿ ಅತಿ ಹೆಚ್ಚು ಸಹಕಾರಿ ಸಂಘ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆಯಾದ ಬೆಳಗಾವಿ ಜಿಲ್ಲೆಯ ಮೂಡಲಗಿಯ ಶ್ರೀ ಮಹಾಲಕ್ಷ್ಮೀ ಅರ್ಬನ ಕೋ–ಆಪ್ ಕ್ರೆಡಿಟ್ ಸೊಸೈಟಿಯು ನಿರಂತರವಾಗಿ ಉತ್ತಮ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ.

ಮೂಡಲಗಿಯಲ್ಲಿ 1992ರಲ್ಲಿ ಸಿಂಡಿಕೇಟ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಅರ್ಬನ್ ಬ್ಯಾಂಕುಗಳು ಮಾತ್ರ ಕಾರ್ಯನಿರ್ವಹಿಸುತ್ತಿರುವ ಸಮಯದಲ್ಲಿ ವ್ಯಾಪಾರಸ್ಥರಿಗೆ ಹಾಗೂ ರೈತರಿಗೆ ಸಾಲದ ಅವಶ್ಯಕತೆಯನ್ನು ಮನಗೊಂಡು ರೈತ ಸಂಘದ ಮುಖಂಡರಾದ ತಮ್ಮಣ್ಣಾ ಸಿದ್ದಪ್ಪಾ ಪಾರ್ಶಿ ಹಾಗೂ ಲಕ್ಕಪ್ಪಾ ಪೂಜೇರಿ ಇವರ ಮುಂದಾಳತ್ವದಲ್ಲಿ ದಿನಾಂಕ: 03–05–1992ರಂದು ಬಸವ ಜಯಂತಿಯ ಶುಭ ದಿನದಂದು ಮೂಡಲಗಿಯಲ್ಲಿ ಪ್ರಪ್ರಥಮವಾಗಿ ಶ್ರೀ ಮಹಾಲಕ್ಷ್ಮೀ ಅರ್ಬನ ಕೋ–ಆಪ್ ಕ್ರೆಡಿಟ್ ಸೊಸಾಯಿಟಿಯನ್ನು ಪ್ರಾರಂಭಿಸಲಾಯಿತು. ಸಂಘಕ್ಕೆ ಮೂಡಲಗಿ ಸಿದ್ದಸಂಸ್ಥಾನಮಠ ಶ್ರೀಶ್ರೀಶ್ರೀ ಶಿವಬೋಧರಂಗ ಮಹಾಸ್ವಾಮಿಗಳು ಇವರ ಅಮೃತ ಹಸ್ತದಿಂದ ಚಾಲನೆ ದೊರೆತಿದೆ.

ಪ್ರಾರಂಭದಲ್ಲಿ ಕೇವಲ 713 ಜನ ಸದಸ್ಯರಿಂದ ಪ್ರಾರಂಭವಾದ ಸಂಘ ರೂ. 5,14,600=00 ಶೇರು ಬಂಡವಾಳದೊಂದಿಗೆ ಬಾಡಿಗೆಯ ಚಿಕ್ಕ ಕಟ್ಟಡದಲ್ಲಿ ಪ್ರಾರಂಭಗೊಂಡಿತು. ಪ್ರಾರಂಭದಲ್ಲಿ ದಿ. ಲಕ್ಕಪ್ಪಾ ಹ. ಪೂಜೇರಿ ಇವರು ಸಂಸ್ಥೆಯ ಚುಕ್ಕಾಣಿಯನ್ನು ಹಿಡಿದು ಎಲ್ಲ ರೈತ ಮುಖಂಡರನ್ನು ಜೊತೆಗೂಡಿಸಿ ಕೊಂಡು ಸಂಘವನ್ನು ಮುನ್ನೆಡಿಸಿದರು ಕೇವಲ 2 ವರ್ಷಗಳ ಅವಧಿಯಲ್ಲಿ ದಿ. ಲಕ್ಕಪ್ಪಾ ಪೂಜೇರಿಯವರು ಅಕಾಲಿಕ ಮರಣ ಹೊಂದಿದ ನಂತರ ಸಂಘದ ಚುಕ್ಕಾಣಿಯನ್ನು ಸಮಾಜ ಸೇವಕರು ರೈತ ಮುಖಂಡರು ಹಾಗೂ ರಾಜಕೀಯ ಮುತ್ಸದ್ದಿಗಳಾದ ತಮ್ಮಣ್ಣಾ ಸಿದ್ದಪ್ಪಾ ಪಾರ್ಶಿಯವರ ಹೆಗಲಿಗೆ ಬಿದ್ದಿತು.

ತಾಲೂಕಿನ ರೈತಮಿತ್ರರೊಂದಿಗೆ ಹಾಗೂ ಸಂಘದ ಶೇರುದಾರರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ ತಮ್ಮಣ್ಣಾ



ಸಿದ್ದಪ್ಪಾ ಪಾರ್ಶಿಯವರು ಸಂಘವನ್ನು ಒಳ್ಳೆಯ ರೀತಿಯಿಂದ ಮುನ್ನಡೆಸಿಕೊಂಡು ತನ್ನ ಪ್ರಥಮ ಶಾಖೆಯನ್ನು ಸಂಘದ ಕಾರ್ಯಕ್ಷೇತ್ರವಾದ ಖಾನಟ್ಟಿಯಲ್ಲಿ 1999ರಲ್ಲಿ ಪ್ರಾರಂಭಿಸಿದರು. ನಂತರ ತನ್ನ ಎರಡನೇ ಶಾಖೆಯನ್ನು 19–08–2002 ರಲ್ಲಿ ಸುಣಧೋಳಿಯಲ್ಲಿ ಪ್ರಾರಂಭಿಸಲಾಯಿತು.

ಸಂಘವು 2 ಶಾಖೆಯನ್ನು ಹೊಂದಿದ ನಂತರ ನೂತನ ಕಟ್ಟಡದ ಉದ್ಘಾಟನೆ ಹಾಗೂ ದಶಮಾನೋತ್ಸವ ಸಮಾರಂಭವನ್ನು ದಿನಾಂಕ: 11–11–2002ರಂದು ಅನೇಕ ಜನ ಪೂಜ್ಯರು ಕೇಂದ್ರ ಸರ್ಕಾರದ ಮಂತ್ರಿಗಳು ಹಾಗೂ ಸಹಕಾರ ಸಚಿವರ ಸಮ್ಮುಖದಲ್ಲಿ ಸಮಾರಂಭವನ್ನು ಮಾಡಲಾಯಿತು. ನಂತರ ಕೆಲವು ವರ್ಷಗಳ ನಂತರ 3ನೇ ಶಾಖೆಯನ್ನು ರಾಮದುರ್ಗ ತಾಲೂಕಿನ ಕಟಕೋಳ ಪಟ್ಟಣದಲ್ಲಿ, 4ನೇ ಶಾಖೆಯನ್ನು ಸಾಲಹಳ್ಳಿ ಗ್ರಾಮದಲ್ಲಿ, 5ನೇ ಶಾಖೆಯನ್ನು ರಾಮದುರ್ಗದಲ್ಲಿ ಪ್ರಾರಂಭಿಸಲಾಯಿತು. ನಂತರ ಸಂಘವು ತನ್ನ ಕಾರ್ಯಕ್ಷೇತ್ರವನ್ನು ಬಾಗಲಕೋಟೆ ಜಿಲ್ಲೆಗೆ ವಿಸ್ತರಿಸುವ ಉದ್ದೇಶವನ್ನು ಹೊಂದಿ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪೂರದಲ್ಲಿ 6ನೇ ಶಾಖೆಯನ್ನು ಮುಧೋಳದಲ್ಲಿ, 7ನೇ ಶಾಖೆಯನ್ನು ಸವದತ್ತಿ ತಾಲೂಕಿನ ಮುನವಳ್ಳಿಯಲ್ಲಿ, 8ನೇ ಶಾಖೆಯನ್ನು ಜಮಖಂಡಿಯಲ್ಲಿ, 9ನೇ ಶಾಖೆಯನ್ನು ಹಾಗೂ ಹಾರೂಗೇರಿಯಲ್ಲಿ, 10ನೇ ಶಾಖೆಯನ್ನು ತೆರೆದು ಒಟ್ಟು 10 ಶಾಖೆಗಳನ್ನು ಒಳಗೊಂಡು ಉತ್ತಮ ರೀತಿಯಿಂದ ಕಾರ್ಯವನ್ನು ನಿರ್ವಹಿಸುತ್ತಾ ಸಾಗಿವೆ.

ಮುಂದೆ ಸಂಘವು 25ನೇ ವರ್ಷಗಳನ್ನು ಪೂರೈಸಿದ ಪ್ರಯುಕ್ತ ಸಂಸ್ಥೆಯ ಬೆಳ್ಳಿ ಹಬ್ಬವನ್ನು ಆಚರಿಸಬೇಕೆಂದು ಸಂಘದ ಆಡಳಿತ

ಮಂಡಳಿಯವರು ತೀರ್ಮಾನಿಸಿ ದಿನಾಂಕ : 22–10–2018 ರಂದು ಅನೇಕ ಪೂಜ್ಯರ ಸಮ್ಮುಖದಲ್ಲಿ ರಾಜಕೀಯ ಧುರೀಣರ ನೇತೃತ್ವದಲ್ಲಿ ಅತೀ ವಿಜೃಂಬನೆಯಿಂದ ಬೆಳ್ಳಿ ಹಬ್ಬವನ್ನು ಆಚರಿಸಲಾಯಿತು. ಬೆಳ್ಳಿಹಬ್ಬದ ಸವಿ ನೆನಪಿನ ಕಾಣಿಕೆಯಾಗಿ ಸಂಘದ ಭಾವಚಿತ್ರ ಹಾಗೂ ಸಂಘದ ಹೆಸರಿರುವ ಬ್ಯಾಗಗಳನ್ನು ವಿತರಿಸಲಾಯಿತು.

ಹೀಗೆ ಸಂಘವು ಪ್ರತಿ ವರ್ಷ ಹೆಚ್ಚು ಹೆಚ್ಚು ಬಂಡವಾಳವನ್ನು ಹೆಚ್ಚಿಸುವದರೊಂದಿಗೆ ಲಾಭಾಂಶದಲ್ಲಿಯೂ ಸಹಿತ ಉತ್ತಮ ಪ್ರಗತಿಯನ್ನು ಸಾಧಿಸಿ ಹೆಚ್ಚು ಹೆಚ್ಚು ಲಾಭವನ್ನು ಹೊಂದುತ್ತಾ ಸಾರ್ವಜನಿಕರ ಶೇರುದಾರರ ಹಾಗೂ ಎಲ್ಲ ಜನರ ಪ್ರೀತಿಯನ್ನು ಗಳಿಸುತ್ತಾ ಮುನ್ನುಗ್ಗುತ್ತಿದೆ. ಸಂಘವು ಪ್ರಾರಂಭದಿಂದಲೂ ಸತತವಾಗಿ 25 ವರ್ಷಗಳಿಂದ ಸದಸ್ಯರಿಗೆ ಶೇ. 15% ರಷ್ಟು ಲಾಭಾಂಶವನ್ನು ನೀಡುತ್ತಾ ಬಂದಿದೆ.

**ಸಂಘದ ಪ್ರಗತಿ ಪಕ್ಷಿ ನೋಟ :**
**31–03–2023ಕ್ಕೆ ಇದ್ದಂತೆ ಸಂಘದ ಆರ್ಥಿಕ ನೋಟ**

| | |
|---|---|
| ಸಂಘದ ಸದಸ್ಯರ ಸಂಖ್ಯೆ | 9985 |
| ಸದಸ್ಯರ ಶೇರು ಬಂಡವಾಳ | 2.69 ಕೋಟಿ ರೂ |
| ಸಂಘದ ನಿಧಿಗಳು | 14.08 ಕೋಟಿ ರೂ |
| ಠೇವುಗಳು | 92.97 ಕೋಟಿ ರೂ |
| ಸಂಘದಿಂದ ನೀಡಿದ ಸಾಲ | 81.26 ಕೋಟಿ ರೂ |
| ಠೇವಣಿದಾರರ ಭದ್ರತೆಗಾಗಿ ಗುಂತಾವಣಿ | 30.62 ಕೋಟಿ ರೂ |
| ದುಡಿಯುವ ಬಂಡವಾಳ | 116.45 ಕೋಟಿ ರೂ |
| 31–03–2023ಕ್ಕೆ ಲಾಭ | 3.51 ಕೋಟಿ ರೂ |


ಮಲ್ಲಪ್ಪ ಗು. ಗಾಣಿಗೇರ
**ಅಧ್ಯಕ್ಷರು**


ಡಾ। ಪ್ರಕಾಶ ಶಿ. ನಿಡಗುಂದಿ
**ಉಪಾಧ್ಯಕ್ಷರು**


ಸಿ.ಎಸ್. ಬಗನಾಳ
**ಪ್ರಧಾನ ವ್ಯವಸ್ಥಾಪಕರು**

## ಡಾ. ಎಮ್.ಎನ್. ರಾಜೇಂದ್ರ ಕುಮಾರ್ ರವರಿಗೆ ಅಂತರ್ ರಾಷ್ಟ್ರೀಯ ಪ್ರಶಸ್ತಿ : ಅಭಿನಂದನೆ ಸಲ್ಲಿಕೆ



ದಿನಾಂಕ: 08.07.2023ರಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಲಿ.) ಮಂಗಳೂರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ(ನಿ.) ಬೆಂಗಳೂರು ಇದರ ಅಧ್ಯಕ್ಷರಾದ ಸಹಕಾರ ರತ್ನ ಡಾ. ಎಮ್.ಎನ್.ರಾಜೇಂದ್ರ ಕುಮಾರ್ ರವರಿಗೆ ಅಂತರ್‌ರಾಷ್ಟ್ರೀಯ ಪ್ರಶಸ್ತಿ ಲಭಿಸಿದ ಹಿನ್ನಲೆಯಲ್ಲಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ವತಿಯಿಂದ "ಆತ್ಮಶಕ್ತಿ ಸೌಧ"ದಲ್ಲಿ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಚಿತ್ತರಂಜನ್ ಬೋಳಾರ್‌ರವರ ಅಧ್ಯಕ್ಷತೆಯಲ್ಲಿ ಸಂಘದ ಸಿಬ್ಬಂದಿಗಳು ಮತ್ತು ಎಚ್.ಡಿ.ಸಿ.ಎಮ್ ಶಿಕ್ಷಣಾರ್ಥಿಗಳ ವತಿಯಿಂದ ಗೌರವಿಸಲಾಯಿತು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಲಿ.) ಮಂಗಳೂರು ಇದರ ನಿರ್ದೇಶಕರಾದ ಶ್ರೀ ಶಶಿಕುಮಾರ್ ರೈ ಬಲ್ಯೋಟ್ಟು, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಉಪಾಧ್ಯಕ್ಷರಾದ ಶ್ರೀ ನೇಮಿರಾಜ್ ಪಿ., ನಿರ್ದೇಶಕರುಗಳಾದ ಶ್ರೀ ಜಿ. ಪರಮೇಶ್ವರ ಪೂಜಾರಿ, ಶ್ರೀ ಆನಂದ ಎಸ್ ಕೊಂಡಾಣ, ಸೀತಾರಾಮ್ ಎನ್, ಶ್ರೀ ರಮನಾಥ್ ಸನಿಲ್, ಶ್ರೀ ಬಿ.ಪಿ ದಿವಾಕರ್, ಶ್ರೀ ಗೋಪಾಲ್ ಎಮ್, ಶ್ರೀಮತಿ ಉಮಾವತಿ, ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್ ಮತ್ತು ಕರ್ನಾಟಕ ರಾಜ್ಯ ಕೋ–ಆಪರೇಟಿವ್ ಅಪೆಕ್ಸ್ ಬ್ಯಾಂಕ್(ಲಿ.) ಬೆಂಗಳೂರು ಇದರ ನಿವೃತ್ತ ಅಧಿಕಾರಿ ಶ್ರೀ ಎಸ್. ಜಿ. ಕುಲಕರ್ಣಿ ಮತ್ತು ಆರ್.ಐ.ಸಿ.ಎಮ್ ಬೆಂಗಳೂರು ಇದರ ತರಬೇತಿ ಸಮನ್ವಯ ಅಧಿಕಾರಿ ಹಾಗೂ ಉಪನ್ಯಾಸಕರಾದ ಶ್ರೀ ಸುರೇಶ್ ಪಿ.ಎನ್ ಉಪಸ್ಥಿತರಿದ್ದರು.

# ಭಾರತದ ಸ್ವಾತಂತ್ರ್ಯೋತ್ಸವ ಮತ್ತು ಪ್ರಗತಿಯ ಹೆಜ್ಜೆಗಳು



140 ಕೋಟಿ ಜನಸಂಖ್ಯೆ ಹೊಂದಿರುವ ಜಗತ್ತಿನ ಬೃಹತ್ ಪ್ರಜಾಪ್ರಭುತ್ವ ದೇಶ ಭಾರತ. ಸ್ವಾತಂತ್ರ್ಯೋತ್ಸವ ಆಚರಣೆ ಸಂಭ್ರಮಿಸಲು ಹಲವಾರು ಕಾರಣಗಳಿವೆ. ಪ್ರಜಾಪ್ರಭುತ್ವದ ತತ್ವದ ಆಧಾರದ ಮೇಲೆ ರಚಿತವಾದ ಭಾರತ ಸಂವಿಧಾನ ಶಿಲ್ಪಿ ಡಾ ಬಿ.ಆರ್. ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಸಂವಿಧಾನ ದೇಶದಲ್ಲಿರುವ ಎಲ್ಲಾ ಜಾತಿ, ಧರ್ಮ, ಭಾಷೆಯವರಿಗೂ ಬದುಕುವ ಹಕ್ಕು, ಮತದಾನದ ಹಕ್ಕು, ವಾಕ್ ಸ್ವಾತಂತ್ರ್ಯ ಹಕ್ಕು ಪ್ರತಿಭಟನೆಯ ಹಕ್ಕು ನೀಡುವುದರ ಜೊತೆಗೆ ತಮ್ಮ ತಮ್ಮ ಧರ್ಮದ ಆಚಾರ ವಿಚಾರದಂತೆ ಬದುಕುವ ಸ್ವಾತಂತ್ರ್ಯ ನೀಡಿದೆ. ಭಾರತ ಸರ್ಕಾರ ಯಾವುದೇ ಧರ್ಮಕ್ಕೆ ಸೇರಿಲ್ಲ. ಸರ್ಕಾರ ನಡೆಸುವವರು ತಮ್ಮ ಧರ್ಮವನ್ನು ಮನೆಯಲ್ಲಿ ಆಚರಿಸಿಕೊಳ್ಳಬಹುದೆ ಹೊರತು ಆಡಳಿತದಲ್ಲಿ ಧರ್ಮ ತರಬಾರದು ಎಂದು ಸಂವಿಧಾನ ಹೇಳಿರುವುದು ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಗಿದೆ.

### ಸ್ವಾತಂತ್ರ್ಯೋತ್ಸವದ ಖುಷಿ ಹೆಚ್ಚಿಸಿದ ಚಂದ್ರಯಾನ 3



2023ರ ಜುಲೈ 14ರಂದು ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಶ್ರೀಹರಿಕೋಟಾದ ಸತೀಶ್ ದವನ ಅಂತರಿಕ್ಷಾ ಉಡಾವಣಕೇಂದ್ರದಿಂದ ಯಶಸ್ವಿಯಾಗಿ ಉಡ್ಡಯನ ಮಾಡಿದ ಚಂದ್ರಯಾನ 3 ಉಪಗ್ರಹ ಉಡಾವಣೆ ಭಾರತೀಯ ಹೃದಯದ ಆತ್ಮವಿಶ್ವಾಸ ಗಗನದೆತ್ತರಕ್ಕೆ ಏರುವಂತೆ ಮಾಡಿದೆ. 3ಲಕ್ಷ 84 ಸಾವಿರ ಕಿಮೀ ದೂರದಲ್ಲಿರುವ ಚಂದ್ರನ ದಕ್ಷಿಣ ಧ್ರುವ ಸಂಶೋಧನೆ ಮಾಡುವುದು ಚಂದ್ರಯಾನ 3 ಮುಖ್ಯ ಉದ್ದೇಶವಾಗಿದೆ. 2008 ರಲ್ಲಿ ಚಂದ್ರಯಾನ 1 ಯಶಸ್ವಿಯಾಗಿಸಿದ ಇಸ್ರೋ ವಿಜ್ಞಾನಿಗಳು ಚಂದ್ರಯಾನ 3 ಯಶಸ್ವಿಯಾಗಿಸುವ ಮೂಲಕ ಭಾರತದ 76ನೇ ಸ್ವಾತಂತ್ರ್ಯೋತ್ಸವವನ್ನು ಇನ್ನಷ್ಟು ಅರ್ಥ ಪೂರ್ಣವಾಗಿ ಆಚರಿಸುವಂತೆ ಮಾಡಿದ್ದಾರೆ.

### ರಸ್ತೆ ಅಪಘಾತ : ಅಮಾಯಕ ಜೀವಗಳ ಬಲಿ



76ನೇ ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ ಹಿಂದಿರುಗಿ ನೋಡಿದಾಗ ಹಲವಾರು ಅಡತಡೆ ಇತಿಮಿತಿಗಳ ನಡುವೆ ಅಭಿವೃದ್ಧಿ ವೇಗ ತೃಪ್ತಿ ತರುವಂತಿದೆ ಜಗತ್ತಿನಲ್ಲಿಯೇ ಅತಿದೊಡ್ಡ ರಸ್ತೆ ಹಾಗೂ ರೈಲು ಜಾಲ ಹೊಂದಿರುವ ಭಾರತದಲ್ಲಿ ಹೆಚ್ಚುತ್ತಿರುವ ರಸ್ತೆ ಹಾಗೂ ರೈಲು ಅಪಘಾತ ತಡೆಗೆ ವೈಜ್ಞಾನಿಕ ಯೋಜನೆ ರೂಪಿಸುವ ಅಗತ್ಯವಿದೆ. ಭಾರತದಲ್ಲಿ ಪ್ರತಿವರ್ಷ ರಸ್ತೆ ಅಪಘಾತದಲ್ಲಿ ಒಂದುವರೆ ಲಕ್ಷಕ್ಕೂ ಅಧಿಕ ಮಂದಿ ಅಮಾಯಕರು ಯಾವುದೇ ತಪ್ಪು ಮಾಡದೆ ಜೀವ ಕಳೆದುಕೊಳ್ಳುತ್ತಾರೆ. ಇದರಿಂದ ಎಷ್ಟೋ ಕುಟುಂಬಗಳು ಬೀದಿಪಾಲಾಗುತ್ತವೆ. ಸರ್ಕಾರದ ದಾಖಲೆಗಳ ಪ್ರತಿದಿನ ದೇಶದಲ್ಲಿ 1130 ರಸ್ತೆ ಅಪಘಾತ ಸಂಭವಿಸುತ್ತಿದ್ದು 422 ಮಂದಿ ಸಾವನಪ್ಪುತ್ತಾರೆ. ನೂರಾರು ಮಂದಿ ಅಂಗ ವೈಫಲ್ಯದ ಸಮಸ್ಯೆ ಎದುರಿಸುತ್ತಾರೆ. ಅದೇ ರೀತಿ ರೈಲು ಅಪಘಾತದಲ್ಲಿ ಸಾವಿರಾರು ಅಮಾಯಕ ಜೀವಗಳ ಪ್ರಾಣಹಾನಿಯಾಗುತ್ತದೆ. ಪ್ರತಿವರ್ಷ 36 ಸಾವಿರಕ್ಕೂ ಅಧಿಕ ಮಂದಿ ನೀರಿನಲ್ಲಿ ಮುಳುಗಿ ಸಾವನಪ್ಪುತ್ತಾರೆ ಎಂದು ಕೇಂದ್ರ ಸರ್ಕಾರದ ದಾಖಲೆಗಳೆ ಹೇಳುತ್ತವೆ.



ಈ ರೀತಿಯ ಅಪಘಾತಗಳ ತಡೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವೈಜ್ಞಾನಿಕ ಯೋಜನೆ ರೂಪಿಸಿ ಜಾರಿಗೆ ತಂದರೆ ನಮ್ಮ ಸ್ವಾತಂತ್ರ್ಯಕ್ಕೆ ಇನಷ್ಟು ಅರ್ಥ ಬರುತ್ತದೆ ಎಂಬುದು ಜನಸಾಮಾನ್ಯರ ಅಭಿಪ್ರಾಯವಾಗಿದೆ.

### ರೈತರ ಆತ್ಮಹತ್ಯೆಯ ಕಪ್ಪು ಚುಕ್ಕೆ



ಬೆಳೆ ನಷ್ಟ ಹಾಗೂ ಕೈಗೆಬಂದ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗದೆ ನಷ್ಟ ಅನುಭವಿಸುವ ರೈತರು ಸಾಲದ ಹೊರೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುವುದು ಸರ್ವೆಸಾಮಾನ್ಯವಾಗಿದೆ. 2021 ರಲ್ಲಿ ದೇಶಾದ್ಯಂತ 10, 881 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ವರ್ಷ ವರ್ಷ ಆತ್ಮಹತ್ಯೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ದೇಶದ ಬೆನ್ನೆಲುಬ, ಹಾಗೂ ಅನ್ನದಾತ ಎಂಬ ಹೆಗ್ಗಳಿಕೆಗಳಿಸಿರುವ ರೈತ ಸಮುದಾಯ ಆತ್ಮಹತ್ಯೆ ಮಾಡಿಕೊಳ್ಳುವುದು ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಶೋಭೆಯಲ್ಲ. ರೈತರ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಿಸುವುದು ಹಾಗೂ ಬೆಳೆ ಹಾನಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರ ನೀಡುವ ಮೂಲಕ ರೈತರ ಆತ್ಮಹತ್ಯೆ ತಡೆಗೆ ಕ್ರಮಕೈಗೊಳ್ಳುವುದು ಇಂದಿನ ಅಗತ್ಯವಾಗಿದೆ.

ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವುದರ ಜೊತೆಗೆ ಅವರ ಸಂಖ್ಯೆಗನುಗುಣವಾಗಿ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡಿದರೆ ಸ್ವಾತಂತ್ರ್ಯ ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ಉತ್ತಮ ಆರೋಗ್ಯ ಸೌಲಭ್ಯ, ಶುದ್ದ ಕುಡಿಯವ ನೀರಿನಸೌಲಭ್ಯ ತಲೆಮೇಲೊಂದು ಸೂರು ಕಲ್ಪಿಸುವುದರಿಂದ ಜನಸಾಮಾನ್ಯರ ಸ್ವಾತಂತ್ರ್ಯ ಬದುಕನ್ನು ಇನ್ನಷ್ಟು ಹಿತವಾಗಿಸುತ್ತದೆ. ಭಾರತ ದೇಶವು ಎಲ್ಲ ಕ್ಷೇತ್ರಗಳಲ್ಲಿ ಪ್ರಪಂಚದಾದ್ಯಂತ ತನ್ನ ಛಾಪು ಮೂಡಿಸಿದೆ. ವಿಜ್ಞಾನ, ತಂತ್ರಜ್ಞಾನ, ಆರ್ಥಿಕ, ಕೃಷಿ, ಶಿಕ್ಷಣ, ಸಾಹಿತ್ಯ, ಕ್ರೀಡೆ ಸೇರಿದಂತೆ ಎಲ್ಲ ರಂಗಗಳಲ್ಲಿ ಭಾರತ ಸಾಕಷ್ಟು ಪ್ರಗತಿ ಸಾಧಿಸಿದೆ.




### ಪರಮಾಣು ಸಾಮರ್ಥ್ಯದ ದೇಶವಾಗಿರುವ ಭಾರತ

ಅಭಿವೃದ್ಧಿಯ ಪ್ರತಿಯೊಂದು ಕ್ಷೇತ್ರದಲ್ಲೂ ಸಾಕಷ್ಟು ಮುನ್ನಡೆ ಸಾಧಿಸಿದೆ. ಜಗತ್ತು ಇಂದು ಭಾರತದತ್ತ ನೋಡುತ್ತಿದೆ.

ಜಗತ್ತಿನ ಬೃಹತ್ ಆರ್ಥಿಕ ಶಕ್ತಿಯಾಗಿ ಬೆಳೆಯುವದಿಕ್ಕಿನಲ್ಲಿ ದಾಪುಗಾಲು ಇಡುತ್ತಿರುವ ಭಾರತ ಇಂದು ಜಾಗತಿಕ ನಾಯಕತ್ವ ವಹಿಸಿಕೊಳ್ಳುವ ಕಾಲ ಹತ್ತಿರ ಬಂದಿದೆ ಇದಕ್ಕೆ ಮೂಲ ಕಾರಣ ಬೃಹತ್ ಸಂಖ್ಯೆಯಲ್ಲಿರುವ ಕೌಶಲ್ಯ ಬರಿತ ಯುವ ಶಕ್ತಿ ಎಂಬುದು ದೇಶ ಹೆಮ್ಮೆ ಪಡುವ ವಿಷಯವಾಗಿದೆ.

ಇವೆಲ್ಲದರ ನಡುವೆಯೂ ಭಾರತವು ಅಪರಾಧ, ಭ್ರಷ್ಟಾಚಾರ, ಹಿಂಸೆ, ನಕ್ಸಲಿಸಂ, ಭಯೋತ್ಪಾದನೆ, ಬಡತನ, ನಿರುದ್ಯೋಗ, ಅನಕ್ಷರತೆಯಂತಹ ಸಮಸ್ಯೆಗಳೊಂದಿಗೆ ಹೋರಾಡುತ್ತಿದೆ.

ಒಗ್ಗಟ್ಟಾಗಿ ಈ ಸಮಸ್ಯೆಗಳನ್ನು ಕೊನೆಗೊಳಿಸಲು ಪ್ರಯತ್ನಿಸಬೇಕು. ಭಾರತವನ್ನು ಈ ಸಮಸ್ಯೆಗಳಿಂದ ಹೊರತರುವವರೆಗೆ ಸ್ವಾತಂತ್ರ್ಯ ಹೋರಾಟಗಾರರ ಕನಸು ನನಸಾಗುವುದಿಲ್ಲ. ಒಗ್ಗಟ್ಟಿನ ಪ್ರಯತ್ನದಿಂದ ಉತ್ತಮ ಮತ್ತು ಅಭಿವೃದ್ಧಿ ಹೊಂದಿದ ಭಾರತಕ್ಕೆ ಕಾರಣವಾಗುತ್ತದೆ.

**– ಸವಿತಾ ನಾಯ್ಕ್**
**ಬೆಂಗಳೂರು.**

# ಕೇಂದ್ರ ಸಹಕಾರ ಸಚಿವಾಲಯ ಎರಡು ವರ್ಷಗಳ ಪ್ರಗತಿಪರ ನೋಟ – ಅವಲೋಕನ



ಡಾ|| ಎ.ಆರ್. ಶ್ರೀನಾಥ್

**ರಾಷ್ಟ್ರದ ಸಮಗ್ರ ಅಭಿವೃದ್ಧಿಗಾಗಿ ಸಹಕಾರ ಚಳುವಳಿಯನ್ನು ಮತ್ತಷ್ಟು ಬಲಪಡಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರ 6 ಜುಲೈ 2021 ರಂದು ನೂತನ ಸಹಕಾರ ಸಚಿವಾಲಯ ರಚನೆ ಮಾಡಿತು. ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ರವರನ್ನು ಸಹಕಾರ ಮಂತ್ರಿಯನ್ನಾಗಿ ನೇಮಿಸಿತು. ಈ ನಿಟ್ಟಿನಲ್ಲಿ ಸಹಕಾರ ಸಚಿವಾಲಯವು ದಿನಾಂಕ 6.07.2021 ರಿಂದ 14.06.2023ರ ವರೆಗೆ ತೆಗೆದುಕೊಂಡಂತಹ ನಿರ್ಧಾರಗಳು ಈ ರೀತಿ ಇವೆ.**

### ಎ) ಪ್ರಾಥಮಿಕ ಸಹಕಾರ ಸಂಘಗಳ ಆರ್ಥಿಕ ಬಲವರ್ಧನೆ

1. ಪ್ರಾಥಮಿಕ ಸಹಕಾರ ಸಂಘಗಳನ್ನು ಬಲವರ್ಧನೆಗೊಳಿಸಲು ಹಾಗೂ ವಿವಿಧೋದ್ದೇಶ ಸಂಘಗಳಾಗಿ ಮಾಡಲು ಮಾದರಿ ಉಪನಿಧಿಗಳು (ಬೈಲಾಗಳು)ನ್ನು ತಿದ್ದುಪಡಿ ಮಾಡಲಾಗಿದೆ. ಸುಮಾರು 25 ಕ್ಕೂ ಹೆಚ್ಚು ಹೊಸ ವಲಯಗಳನ್ನು ಗುರುತಿಸಿ ಹೊಸ ಉದ್ಯೋಗಾವಕಾಶವನ್ನು ಸೃಷ್ಟಿಸಲು ಅನುವು ಮಾಡಿಕೊಡಲಾಗಿದೆ. ಇಲ್ಲಿಯವರೆಗೂ 23 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮಾದರಿ ಉಪವಿಧಿಯನ್ನು ಅಳವಡಿಸಿಕೊಂಡು ಕಾರ್ಯನಿರತವಾಗಿದೆ.
2. ಪ್ರಾಥಮಿಕ ಸಹಕಾರ ಸಂಘಗಳಲ್ಲಿ (ಪಿಎಸಿಎಸ್) ತಾಂತ್ರಿಕತೆ, ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವಂತಾಗಲು ಗಣಕೀಕರಣದ ಮೂಲಕ ಸಂಘಗಳನ್ನು ಬಲವರ್ಧನೆಗೊಳಿಸಲಾಗುತ್ತಿದೆ. ಇದುವರೆಗೆ ಒಟ್ಟು 58,383 (ಪಿಎಸಿಎಸ್)ಗಳ ಗಣಕೀಕರಣದ ಪ್ರಸ್ತಾಪಗಳನ್ನು ಸ್ವೀಕರಿಸಲಾಗಿದೆ. ಇವುಗಳಲ್ಲಿ 24 ರಾಜ್ಯಗಳು ಹಾಗೂ 4 ಕೇಂದ್ರಾಡಳಿತ ಪ್ರದೇಶಗಳು ಒಳಗೊಂಡಿವೆ.
3. ಪಿಎಸಿಎಸ್/ಡೈರಿ/ಮೀನುಗಾರಿಕಾ ಸಹಕಾರ ಸಂಘಗಳ ಸ್ಥಾಪನೆಗೆ ಒತ್ತು ನೀಡಿದ್ದ ಸುಮಾರು 2 ಲಕ್ಷ ಹೊಸ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಮುಂದಿನ 5 ವರ್ಷಗಳಲ್ಲಿ ಸ್ಥಾಪಿಸುವ ಗುರಿ ಹೊಂದಿದೆ. ಹೊಸ ಸಂಘಗಳ ಸ್ಥಾಪನೆಗೆ ಸಂಬಂಧಿಸಿದ ಕ್ರಿಯಾ ಯೋಜನೆಯನ್ನು ನಬಾರ್ಡ್, ಎನ್‌ಡಿಡಿಬಿ ಮತ್ತು ಎನ್‌ಎಫ್‌ಡಿಬಿ ಸಿದ್ಧಪಡಿಸಿದ್ದು, ಈ ಯೋಜನೆಯ ಮೇರೆಗೆ ಈಗಾಗಲೇ ಕೆಲಸಗಳು ಪ್ರಾರಂಭಗೊಂಡಿವೆ.
4. ಆಹಾರ ಭದ್ರತೆಯನ್ನು ಖಾತರಿ ಪಡಿಸಲು ಸಹಕಾರಿ ವಲಯದಲ್ಲಿ ವಿಶ್ವದ ಅತಿದೊಡ್ಡ ವಿಕೇಂದ್ರೀಕೃತ ಧಾನ್ಯ ಶೇಖರಣಾ ಯೋಜನೆಯನ್ನು ರಾಜ್ಯಗಳ ಸಹಕಾರದೊಂದಿಗೆ ಪ್ರಾಯೋಗಿತ ಯೋಜನೆಯ ಮೂಲಕ ಪ್ರಾರಂಭಿಸಲಾಗುತ್ತಿದೆ. ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಹಕಾರಿ ಅಭಿವೃದ್ಧಿ ಸಮಿತಿಯ ಯೋಜನೆಯನ್ನು ಸಮನ್ವಯಗೊಳಿಸುತ್ತಿದೆ.
5. ಇ–ಸೇವೆಗಳಿಗಾಗಿ ಉತ್ತಮ ಪ್ರವೇಶವಕಾಶಕ್ಕಾಗಿ (access) ಪಿಎಸಿಎಸ್‌ಗಳನ್ನು ಸಾಮಾನ್ಯ ಸೇವಾ ಕೇಂದ್ರಗಳನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಇಲ್ಲಿಯವರೆಗೆ 15,000 ಕ್ಕೂ ಹೆಚ್ಚು ಪಿಎಸಿಎಸ್‌ಗಳನ್ನು ಸಿಎಸ್‌ಸಿ ಯಾಗಿ ಅಭಿಮುಖಗೊಳಿಸಲಾಗಿದೆ ಮತ್ತು ಬಾಕಿ ಇರುವ ಪಿಎಸಿಎಸ್‌ಗಳನ್ನು ಅಭಿಮುಖಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.
6. ಪ್ರಾಥಮಿಕ ಸಹಕಾರ ಸಂಘಗಳಿಂದ ಹೊಸ ರೈತ ಉತ್ಪಾದಕ ಸಂಸ್ಥೆ (ಎಫ್‌ಪಿಒ)ಗಳ ರಚನೆಗೆ ಒತ್ತುಕೊಟ್ಟಿದ್ದು ಈಗಾಗಲೇ ಸಹಕಾರಿ ವಲಯದಲ್ಲಿ 1100 ಎಫ್‌ಪಿಒ ಗಳನ್ನು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ಹಂಚಿಕೆ ಮಾಡಲು ನಿರ್ಧರಿಸಿದೆ. ಈ ಉಪಕ್ರಮವು ಸಹಕಾರಿ ಸಂಘಗಳ ಸದಸ್ಯರಿಗೆ ತಮ್ಮ ಉತ್ಪನ್ನಗಳಿಗೆ ನ್ಯಾಯಯುತ ಮತ್ತೆ ಲಾಭದಾಯಕ ಬೆಲೆಗಳನ್ನು ಪಡೆಯಲು ಅಗತ್ಯವಾದ ಮಾರುಕಟ್ಟೆ ಸಂಪರ್ಕವನ್ನು ಒದಗಿಸಲು ಸಹಾಯವಾಗುತ್ತದೆ.
7. ಪೆಟ್ರೋಲಿಯಂ ಸಚಿವಾಲಯವು ಪಿಎಸಿಎಸ್‌ಗಳನ್ನು ಎಲ್‌ಪಿಜಿ ವಿತರಕರಿಗೆ ಅರ್ಹವಾಗಿಸಲು ನಿಯಮಗಳನ್ನು ತಿದ್ದುಪಡಿ ಮಾಡಿ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಲು ಅವಕಾಶ ಕಲಿಸುತ್ತಿದೆ. ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಉದ್ಯೋಗಾವಕಾಶವನ್ನು ಸೃಷ್ಟಿಸುತ್ತದೆ.
8. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಸಚಿವಾಲಯವು ಅಸ್ತಿತ್ವದಲ್ಲಿರುವ ಬೃಹತ್ ಗ್ರಾಹಕ ಪರವಾನಗಿ ಪಡೆದು ಪಿಎಸಿಎಸ್‌ಗಳನ್ನು ಚಿಲ್ಲರೆ ಮಳಿಗೆಗಳಾಗಿ ಪರಿವರ್ತಿಸಲು ಒಪ್ಪಿಕೊಂಡಿದ್ದು ಈ ಕಾರ್ಯವು ಪ್ರಗತಿಪರದಲ್ಲಿದೆ.
9. ಗ್ರಾಮೀಣ ಮಟ್ಟದಲ್ಲಿ ಜೆನೆರಿಕ್ ಔಷಧಿಗಳ ಲಭ್ಯತೆಗಾಗಿ ಪಿಎಸಿಎಸ್‌ಗಳಲ್ಲಿ 2000 ಜನೌಷಧಿ ಕೇಂದ್ರಗಳನ್ನು ತೆರೆಯಲು ನಿರ್ಧರಿಸಲಾಗಿದೆ.
10. ಪಿಎಸಿಎಸ್‌ಗಳಲ್ಲಿ ರಸಗೊಬ್ಬರ ವಿತರಣಾ ಕೇಂದ್ರವನ್ನಾಗಿ ಪರಿವರ್ತಿಸಿ ರಸಗೊಬ್ಬರ ಚಿಲ್ಲರೆ ವ್ಯಾಪಾರಿಗಳು ಪ್ರಧಾನ ಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳು (ಪಿಎಂಕೆಎಸ್ಕೆ) ಕೀಟನಾಶಕಗಳು ಹಾಗೂ ಸಿಂಪಡಿಕೆಯ ಡ್ರೋನ್‌ಗಳನ್ನು ಉದ್ಯಮಿಗಳಾಗಿ ಕಾರ್ಯನಿರ್ವಹಿಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ.
11. ಕೋಟಿ ರೈತ ಸದಸ್ಯರೊಂದಿಗೆ ನೇರ ಸಂಪರ್ಕ ಹೊಂದಿರುವ ಪಿಎಸಿಎಸ್‌ನ ರಚನೆ ಮತ್ತು ವ್ಯಾಪ್ತಿಯನ್ನು ಪಂಚಾಯ್ತಿ ಮಟ್ಟದಲ್ಲಿ ವಿಕೇಂದ್ರೀಕೃತ ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಬಳಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಪಿಎಂ–ಕುಸುಮಾ

ಯೋಜನೆಯ ಸಂಯೋಜನೆಯ ಕಾರ್ಯ ನಡೆಯುತ್ತಿದೆ.

**ಬಿ) ಸಹಕಾರ ಸಂಘಗಳಿಗೆ ಆದಾಯ ತೆರಿಗೆಯಲ್ಲಿ ಪರಿಹಾರ**

- ಆದಾಯ ತೆರಿಗೆ ಮೇಲಿನ ಸರ್ಜಾರ್ಜ್ ಕಡಿತ
- ಕನಿಷ್ಠ ಪರ್ಯಾಯ ತೆರಿಗೆ (ಎಂಎಟಿ) ಕಡಿತ
- ಪಿಎಸಿಎಸ್ ಮತ್ತು ಪಿಪಿಎ ಆರ್ಡಿಬಿಗಳಿಂದ ನಗದು ಠೇವಣಿ ಮತ್ತು ನಗದು ಸಾಲಗಳ ಮಿತಿ ಹೆಚ್ಚಳ
- ಹೊಸ ಉತ್ಪಾದನಾ ಸಹಕಾರ ಸಂಘಗಳಿಗೆ ತೆರಿಗೆ ಕಡಿತ
- ನಗದು ಹಿಂಪಡೆಯುವಿಕೆಯಲ್ಲಿ ಮೂಲದಲ್ಲಿ ತೆರಿಗೆ ಕಡಿತದ (ಟಿಡಿಎಸ್) ಮಿತಿಯಲ್ಲಿ ಹೆಚ್ಚಳ
- ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 269 ಎಸ್‌ಟಿ ಅಡಿಯಲ್ಲಿ ನಗದು ವಹಿವಾಡಿನಲ್ಲಿ ಪರಿಹಾರ

**ಸಿ) ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ತೊಂದರೆಗಳಿಗೆ ಪರಿಹಾರ**

ಯು.ಸಿ.ಬಿಗಳು ತಮ್ಮ ವ್ಯವಹಾರವನ್ನು ವಿಸ್ತರಿಸಲು ಹೊಸ ಶಾಖೆಗಳನ್ನು ತೆರೆಯಲು ಸಾಧ್ಯವಾಗುತ್ತದೆ. ವಾಣಿಜ್ಯ ಬ್ಯಾಂಕಗಳಂತೆ ಯು.ಸಿ.ಬಿಗಳು ಬಾಕಿ ಇರುವ ಸಾಲಗಳ ಒಂದು ಬಾರಿ ಇತ್ಯರ್ಥವನ್ನು ನೀಡಲಾಗಿದೆ. ಯು.ಸಿ.ಬಿ ಗಳೊಂದಿಗೆ ನಿಯಮಿತ ಸಂವಹನ ನೀಡಲಾಗಿದೆ ಯು.ಸಿ.ಬಿ ಗಳೊಂದಿಗೆ ನಿಯಮಿತ ಸಂವಹನ ಆರ್.ಬಿ.ಐ ನಲ್ಲಿ ನೋಡಲು ಅಧಿಕಾರಿಯನ್ನು ನೇಮಿಸಲಾಗಿದೆ ಗ್ರಾಮಿಣ & ನಗರ ಸಹಕಾರಿ ಬ್ಯಾಂಕುಗಳ ವೈಯಕ್ತಿಕ ಗೃಹ ಸಾಲದ ಮಿತಿಯನ್ನು ರಿಸರ್ವ ಬ್ಯಾಂಕ್ ದ್ವಿಗುಣಗೊಳಿಸಿದೆ. ಸಹಕಾರಿ ಬ್ಯಾಂಕುಗಳನ್ನು ಸಿ.ಜಿ.ಟಿ.ಎಂ.ಎಸ್.ಇ.ಯ ಸದಸ್ಯ ಸಾಲ ನೀಡಿಕೆ ಸಂಸ್ಥೆಗಳಾಗಿ (ಎಂ.ಎಲ್.ಡಿ) ಎನೇಬಲ್ಡ್ ಪೇಮೆಂಟ್ ಸಿಸ್ಟಮ್ (ಎ.ಇ.ಪಿ.ಎಸ್) ಗೆ ಅಭಿಮುಖ ಗೊಳಿಸಲಾಗಿದೆ.

**ಡಿ) ಸಹಕಾರಿ ಸಕ್ಕರೆ ಕಾರ್ಖಾನೆಗಳ ಪುನರುಜ್ಜೀವನ**

- ಸಹಕಾರಿ ಸಕ್ಕರೆ ಕಾರ್ಖಾನೆಗಳ ಆದಾಯ ತೆರಿಗೆ ಯಿಂದ ವಿನಾಯಿತಿ ಹಾಗೂ ಇವುಗಳ ಸಮಸ್ಯೆಗಳನ್ನು ಬಗೆ ಹರಿಸುವುದು
- ಎನ್.ಸಿ.ಡಿ.ಸಿ ಮೂಲಕ ರೂ.10,000 ಕೋಟಿ ಅನುದಾನ
- ಎಥೆನಾಲ್ ಖರೀದಿ ಮತ್ತು ಕೋಜೆನ್ ವಿದ್ಯುತ್ ಸ್ಥಾವರಗಳ ಸ್ಥಾಪನೆಗೆ ಆದ್ಯತೆ ನೀಡುವುದು

**ಇ) ರಾಷ್ಟ್ರೀಯ ಮಟ್ಟದಲ್ಲಿ ಮೂರು ಹೊಸ ಬಹು ರಾಜ್ಯ ಸೊಸೈಟಿಗಳು**

- ಸಹಕಾರಿ ವಲಯದ ರಫ್ತನ್ನು ಉತ್ತೇಜಲು ಹೊಸ ಬಹು–ರಾಜ್ಯ ಸಹಕಾರಿ ಸೊಸೈಟಿಗಳನ್ನು ಸ್ಥಾಪಿಸಿ ಪ್ರಾಥಮಿಕ ಹಂತದಿಂದ ರಾಷ್ಟ್ರ ಹಾಗು ಅಂತರರಾಷ್ಟ್ರೀಯ ಮಟ್ಟದವರೆಗೆ ರೈತರು ತಮ್ಮ ಉತ್ಪನ್ನಗಳನ್ನು ವಹಿವಾಟಿಸಿ ಉತ್ತಮ ಬೆಲೆ ಪಡೆಯುವಂತೆ ಮಾಡಲು ಅನುಕೂಲವಾಗುವಂತೆ ಮಾಡುವುದು.
- ಅದೇ ರೀತಿ ಪ್ರಮಾಣೀಕೃತ ಬೀಜಗಳಿಗಾಗಿ ಹಾಗು ಸಾವಯವ ಕೃಷಿಗಾಗಿ ಹೊಸ ರಾಷ್ಟ್ರೀಯ ಮಟ್ಟದ ಬಹು–ರಾಜ್ಯ ಸಹಕಾರಿ ಸೊಸೈಟಿ ಸ್ಥಾಪನೆ.

**ಎಫ್) ಸಹಕಾರಿ ಕ್ಷೇತ್ರದಲ್ಲಿ ಶಿಕ್ಷಣ ಮತ್ತು ತರಬೇತಿ**

- ಶಿಕ್ಷಣ ತರಬೇತಿ ಸಲಹಾ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ವಿಶ್ವದ ಅತಿ ದೊಡ್ಡ ಸಹಕಾರಿ ವಿಶ್ವ ವಿದ್ಯಾನಿಲಯ ಸ್ಥಾಪನೆ
- ಹೊಸ ಯೋಜನೆಯ ಮೂಲಕ ವಾಮ್ನಿಕಾಮ್ ಎಸ್ಸಿಸಿಟಿ ಮತ್ತು ಜೆ.ಸಿ.ಜಿ.ಸಿ. ಯನ್ನು ಹೆಚ್ಚು ಬಲಪಡಿಸುವುದು
- ಎಸ್ಸಿಸಿಟಿ ಮೂಲಕ ತರಬೇತಿ ಮತ್ತು ಜಾಗೃತಿಯ ಉತ್ತೇಜನ ನೀಡುವುದಕ್ಕೆ ಹೆಚ್ಚು ಒತ್ತು ನೀಡುವುದು.

**ಜಿ) ಹೊಸ ರಾಷ್ಟ್ರೀಯ ಸಹಕಾರ ನೀತಿ ಮತ್ತು ಹೊಸ ರಾಷ್ಟ್ರೀಯ ಸಹಕಾರಿ ಡೇಟಾಬೇಸ್**

- "ಸಹಕಾರದ ಮೂಲಕ ಸಮೃದ್ಧಿ" ಪರಿಕಲ್ಪನೆಯನ್ನು ಸಾಕಾರಗೊಳಿಸಲು ಹೊಸ ಸಹಕಾರ ನೀತಿಯನ್ನು ರೂಪಿಸಲಾಗುತ್ತಿದೆ. ಸದ್ಯದಲ್ಲಿಯೇ ಇದರ ಕರಡು ಪ್ರತಿಯನ್ನು ಸಾರ್ವಜನಿಕ ವಲಯಕ್ಕೆ ಸಮರ್ಪಿಸಿ ಅಂತಿಮ ಸಹಕಾರ ನೀತಿಯನ್ನು ರೂಪಿಸಲಾಗುತ್ತದೆ.
- ಎನ್.ಸಿ.ಯು.ಐ ಮೂಲಕ ಹೊಸ ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ರಚಿಸಲಾಗಿದೆ ಪ್ರಥಮ ಹಂತದಲ್ಲಿ ಪಿ.ಎ.ಸಿ.ಎಸ್ ಹೈನುಗಾರಿಕೆ ಮತ್ತು ಮೀನುಗಾರಿಕೆಯ ಸುಮಾರು 2.64 ಲಕ್ಷ ಸೊಸೈಟಿಗಳ ಮ್ಯಾಪಿಂಗ್ ಅನ್ನು ಪೂರ್ಣಗೊಳಿಸಲಾಗಿದೆ, ಸದ್ಯದಲ್ಲಿಯೇ ಕಾರ್ಯವು ಪೂರ್ಣಗೊಳಿಸಲಾಗುತ್ತಿದೆ.

**ಎಚ್) ಜಿ–2 ಮಾರುಕಟ್ಟೆಯಲ್ಲಿ ಸಹಕಾರ ಸಂಘಗಳನ್ನು "ಖರೀದಿದಾರ" ರಾಗಿ ಮಾಡಲಾಗಿದೆ. ಹಾಗೂ ಮಾರಾಟಗಾರರಾಗಿ ನೋಂದಯಿಸಲು ಪ್ರೇರೇಪಿಸಲಾಗುತ್ತದೆ.**

ಐ) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ (NCDC) ವಿಸ್ತರಿಸಿ ಸಹಕಾರಿ ಕ್ಷೇತ್ರಕ್ಕೆ ಅತ್ಯಗತ್ಯ ವಾಗಿರುವ ಹಣದ ಹರಿವನ್ನು ಹೆಚ್ಚಿಸುವ ಮೂಲಕ ಮುಂದಿನ ಐದು ವರ್ಷಗಳಲ್ಲಿ ಸಾಲ ವಿತರಣೆಯನ್ನು ವರ್ಷಕ್ಕೆ ಸುಮಾರು 3ಲಕ್ಷ ಕೋಟಿ ರೂ.ಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ

ಜೆ) ಕೇಂದ್ರ ರಿಜಿಸ್ಟ್ರಾರ್ ಕಛೇರಿ ಬಲವರ್ಧನೆ. ಗಣಕೀಕರಣ ಯೋಜನೆಯ ಹೊಸ ಎಂ.ಎಸ್.ಸಿ.ಎಸ್.ಗಳನ್ನು ನೋಂದಾಯಿಸಲು ಗಮನಾರ್ಹವಾಗಿ ಸಹಾಯ ಮಾಡಿ ಅವುಗಳ ವ್ಯವಹಾರವನ್ನು ಸುಲಭಗೊಳಿಸುತ್ತದೆ.

- **ಬಹುರಾಜ್ಯ ಸಹಕಾರಿ ಸಂಘಗಳ (ತಿದ್ದುಪಡಿ)ಮಸೂದೆ–2022**

ಈಗಾಗಲೇ ಬಹುರಾಜ್ಯ ಸಹಕಾರಿ ಸಂಘಗಳ ಅಧಿನಿಯಮದಲ್ಲಿ ಸಂವಿಧಾನದ 97ನೇ ತಿದ್ದುಪಡಿಯ ಉಪಬಂಧಗಳನ್ನು ಸೇರಿಸಲು ಆಡಳಿತವನ್ನು ಬಲಪಡಿಸಲು ಪಾರದರ್ಶಕತೆಯನ್ನು ಹೆಚ್ಚಿಸಲು ಉತ್ತರದಯಿತ್ವವನ್ನು ಉದ್ದೇಶಿಸಿ ಕರಡನ್ನು ತಯಾರಿಸಲಾಗಿದೆ ಈ ಮಸೂದೆಯನ್ನು ಸಂಸತ್ತಿನ ಮುಂಬರುವ ಅಧಿವೇಶನದಲದಿ ಪರಿಗಣನೆಗೆ ಮತ್ತು ಅಂಗಿಕಾರಕ್ಕೆ ಮಂಡಿಸಲಾಗುವುದು.

**ಕೆ) ಇತರೆ ಯೋಜನೆಗಳು**

- ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ (ಎ.ಆರ್.ಡಿ.ಬಿ)ಗಳ ಗಣಕೀಕಣ
- ಸಹರಾ ಗ್ರೂಪ್ ಆಫ್ ಸೊಸೈಟಿಗಳ ಹೂಡಿಕೆದಾರಿಗೆ ಮರು ಪಾವತಿ
- ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ಕಛೇರಿಯ ಗಣಕೀಕರನಗೊಳಿಸುವ ಯೋಜನೆ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▶▶ ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು

....ಹಿಂದಿನ ಸಂಚಿಕೆಯಿಂದ

### ಸಂಯೋಜನೆ, ವಿಭಜನೆ, ಆಸ್ತಿ ಮತು ಜವಾಬ್ದಾರಿಗಳ ವರ್ಗಾವಣೆ ಕಲಂ–14

### ಸಂಘಗಳಿಂದ ಪೂರಕ ಸಂಸ್ಥೆಗಳ ಸ್ಥಾಪನೆ ಪಾಲುಗಾರಿಕೆಗಳನ್ನು ಮಾಡಿಕೊಳ್ಳುವಿಕೆ

ಸಹಕಾರ ಸಂಘಗಳು ಮೂಲತಃ ಹಣಕಾಸಿನ ಸಂಸ್ಥೆಗಳು. ವ್ಯವಹಾರ ನಡೆಸುವಂತಹವುಗಳು. ಹೊರಗೆ ಬದಲಾಗುತ್ತಿರುವ ಪರಿಸ್ಥಿತಿಗಳನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಸಲುವಾಗಿ ತಮ್ಮ ರಚನೆಯಲ್ಲೂ ಬದಲಾವಣೆ ಮಾಡಿಕೊಳ್ಳುವ ಸಂಭವ ಬರಬಹುದು. ಅದಕ್ಕಾಗಿ ಕಾಯಿದೆಯಲ್ಲಿ ಅವಕಾಶಗಳನ್ನು ಮಾಡಲಾಗಿದೆ.ಎರಡು ಮತ್ತು ಅದಕ್ಕಿಂತ ಹೆಚ್ಚು ಸಂಘಗಳು ಒಂದರ ಒಳಗೆ ಇನ್ನೊಂದು ಸೇರಿಕೋಂಡು ಒಂದೇ ಸಂಘ ಆಗುವುದಕ್ಕೆ ಸಂಯೋಜನೆ ಎಂದು, ಒಂದೇ ಸಂಘ ಭಾಗವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಘಗಳಾಗುವುದಕ್ಕೆ ವಿಭಜನೆ ಎಂದು ಹೆಸರು.ಸಂಯೋಜನೆ ಅಥವಾ ವಿಭಜನೆ ನಡೆಸಲು ಕಾಯಿದೆಯಲ್ಲಿ ನಿಗದಿಪಡಿಸಿರುವ ಅವಕಾಶಗಳು ಕೆಳಗಿನಂತೆ ಇದೆ.

ಒಂದು ಸಂಘವು ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಘಗಳಾಗಿ ಭಾಗವಾಗಬಹುದು; ಎರಡು ಅಥವಾ ಅದಕ್ಕಿಂದ ಹೆಚ್ಚಿನ ಸಂಘಗಳು ಸಂಯೋಜನೆ ಹೊಂದಿ ಒಂದು ಸಂಘವಾಗಬಹುದು; ಒಂದು ಸಂಘವು ತನ್ನ ಆಸ್ತಿ ಮತ್ತು ಜವಾಬ್ದಾರಿಗಳಲ್ಲಿ ಒಂದು ಭಾಗವನ್ನು, ಇದನ್ನು ಸ್ವೀಕರಿಸಲು ಒಪ್ಪಿದ ಇನ್ನೊಂದು ಸಂಘಕ್ಕೆ ವರ್ಗಾಯಿಸಬಹುದು. ಇದರಲ್ಲಿ ಯಾವುದೇ ನಿರ್ದಾರಕ್ಕೂ ಸಂಬಂಧ ಪಟ್ಟ ಸಂಘ ಅಥವ ಸಂಘಗಳಲ್ಲಿ ಮಹಾ ಸಭೆಯಲ್ಲಿ ಹಾಜರಿದ್ದು, ಮತದಾನ ಮಾಡುತ್ತಿರುವ ಸದಸ್ಯರಲ್ಲಿ 2/3 ಭಾಗದಷ್ಟು ಜನ ಸದಸ್ಯರು ಒಪ್ಪಿರಬೇಕು.ಇದಕ್ಕಾಗಿ ಮಾಡಿದ ನಿರ್ಣಯದಲ್ಲಿ ಸಂಯೋಜನೆ ಅಥವಾ ವಿಭಜನೆ ಅಥವಾ ವರ್ಗಾವಣೆಗೆ ಸಂಬಂಧಿಸಿದ ಎಲ್ಲಾ ವಿವರಗಳು ಇರಬೇಕು. ಈ ನಿರ್ಣಯಕ್ಕೆ ನಿಬಂಧಕರ ಅಂಗೀಕಾರ ಅವಶ್ಯಕ.ನಿಬಂಧಕರ ಅಂಗೀಕಾರ ಬಂದು ಹೊಸ ಸಂಘಗಳನ್ನು ನಿಬಂಧಕರು ನೋಂದಣಿ ಮಾಡಿದ ನಂತರ ಮತ್ತು ಹಳೆಯ ಸಂಘಗಳ ನೋಂದಣಿಯನ್ನು ರದ್ದು ಮಾಡಿದ ನಂತರ ಸಂಯೋಜನೆ ಅಥವಾ ವಿಭಜನೆಯ ಕೆಲಸ ಪೂರ್ಣವಾಗುತ್ತದೆ; ಮತ್ತು ಹಳೆಯ ಸಂಘಗಳ ನಿಗಮಿತ ನಿಕಾಯ ಎಂಬ ಅಸ್ತಿತ್ವ ರದ್ದಾಗುತ್ತದೆ.

ಕಾಯಿದೆಯ ಪ್ರಕಾರ ಒಂದು ಸಹಕಾರ ಸಂಘವು ತನ್ನ ಮಹಾಸಭೆಯಲ್ಲಿ ಬಹುಮತದಿಂದ ಅಂಗೀಕಾರವಾದ ನಿರ್ಣಯವನ್ನು ಆಧರಿಸಿ ಪೂರಕ ಸಂಸ್ಥೆಗಳನ್ನು ಹುಟ್ಟುಹಾಕಬಹುದು; ಅಂತಹ ಪೂರಕ ಸಂಸ್ಥೆಗಳನ್ನು ಸಂಬಂಧಿಸಿದ ಕಾಯಿದೆಯಲ್ಲಿ ನೋಂದಣಿ ಮಾಡಿಸಬೇಕು. ಎರಡು ಅಥವಾ ಹೆಚ್ಚಿನ ಸಹಕಾರ ಸಂಘಗಳು ಒಟ್ಟಿಗೆ ಪಾಲುಗಾರಿಕೆಯಲ್ಲಿ ತೊಡಗಬಹುದು; ಎರಡೂ ಸಂಘಗಳ ಮಹಾ ಸಭೆಗಳಲ್ಲಿ ಅಂಗೀಕಾರವಾದ ನಿರ್ಣಯಗಳ ಪ್ರಕಾರ ಪಾಲುಗಾರಿಕೆಯ ವ್ಯವಹಾರಗಳನ್ನು ನಡೆಸಬಹುದು.

### ಸಹಕಾರ ಸಂಘಗಳಲ್ಲಿ ಸದಸ್ಯತ್ವ ಕಲಂ–16

ಸಹಕಾರ ಸಂಘವು ಒಂದು ಸ್ವಯತ್ತ ಸಂಸ್ಥೆ; ಎಲ್ಲರಿಗೂ ಅವಶ್ಯಕವಾದ ಸಮಾನ ಆರ್ಥಿಕ ಹಿತಾಸಕ್ತಿ/ಉದ್ದೇಶಗಳಿಗಾಗಿ ಅವರು ಸದಸ್ಯರಾಗಿರುತ್ತಾರೆ.ಆದ್ದರಿಂದ ಸಂಘದ ಸದಸ್ಯನಾಗಿ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವ ಉದ್ದೇಶ ಮತ್ತು ಶಕ್ತಿ ಇರುವ ವ್ಯಕ್ತಿಗಳು ಮಾತ್ರ ಸ್ವ ಇಚ್ಛೆಯಿಂದ ಸಹಕಾರ ಸಂಘದ ಸದಸ್ಯರಾಗಬಹುದು; ಪ್ರತಿ ಸಂಘವು ತನ್ನ ಸ್ವ ಇಚ್ಛೆಯಿಂದ ಅಂತಹವರನ್ನು ತನ್ನ ಸದಸ್ಯತ್ವಕ್ಕೆ ಸೇರಿಸಿಕೊಳ್ಳಬೇಕು.ಮತ, ಭಾಷೆ, ಜಾತಿ ಇತ್ಯಾದಿಗಳ ಕಾರಣಗಳ ಮೇಲೆ ಸದಸ್ಯತ್ವ ನಿರಾಕರಿಸುವಂತಿಲ್ಲ. ಆದರೆ ಸಂಘದ ಕರ್ತವ್ಯ/ಜವಾಬ್ದಾರಿಗಳಿಗೆ ಅನುಗುಣವಾಗಿ ಇಲ್ಲದಿರುವಂತಹವರಿಗೆ ಸದಸ್ಯತ್ವ ನಿರಾಕರಿಸುವ ಹಕ್ಕು / ಅಧಿಕಾರ ಸಂಘಕ್ಕೆ ಇದೆ.ಈ ಮೇಲಿನ ಪರಿಕಲ್ಪನೆಗೆ ಮುಕ್ತ ಮತ್ತು ಸ್ವ ಇಚ್ಛೆಯಿಂದ ಸದಸ್ಯತ್ವ ಎನ್ನುತ್ತಾರೆ.ಸಂಘವು ಸಹ ತನ್ನ ಸದಸ್ಯರಿಗೆ ಅಗತ್ಯವಾದ ಸೌಲಭ್ಯಗಳನ್ನು ಮತ್ತು ಸೇವಗಳನ್ನು ಒದಗಿಸಲು ಸಮರ್ತವಾಗಿರಬೇಕು.

### ಸದಸ್ಯರಾಗಲು ಈ ಕೆಳಕಂಡ ಅರ್ಹತೆಗಳು ಇರಬೇಕು

- 18 ವರ್ಷ ಆಗಿರಬೇಕು (ಎಂದರೆ ಕರಾರು ಕಾಯಿದೆ 1872ರ ಪ್ರಕಾರ ಕರಾರು ಮಾಡಿಕೊಳ್ಳಲು ಶಕ್ತನಿರಬೇಕು):
- ಸಂಘದ ಕಾರ್ಯವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು;
- ಸಂಘ ಒದಗಿಸುವ ಸೌಲಭ್ಯಗಳನ್ನು ಪಡೆಯುವ ಅಗತ್ಯ ಅವನಿಗಿರಬೇಕು; ಮತ್ತು
- ಸಂಘದ ಉಪನಿಯಮಗಳ ಪ್ರಕಾರ ಅರ್ಹನಾಗಿರಬೇಕು

ಈಚೆಗೆ ಠೇವಣಿದಾರರಿಗೂ ಸದಸ್ಯರಾಗಲು ಅವಕಾಶ ಕಲ್ಪಿಸಲಾಗಿದೆ. ಸಂಘದ ಸ್ವರೂಪವನ್ನು ಅನುಸರಿಸಿ ಬೇರೆ ಸಹಕಾರ ಸಂಘಗಳು ರಾಜ್ಯ ಅಥವಾ ಕೇಂದ್ರ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಕಂಪನಿ ಮುಂತಾದವುಗಳು ಸಹ ಸದಸ್ಯರಾಗಬಹುದು; ಸಂಘದ ಉಪನಿಯಮಗಳ ಪ್ರಕಾರ ಅರ್ಹನಾದ ವ್ಯಕ್ತಿಗೆ ಸಂಘವು ಸೂಕ್ತ ಕಾರಣಗಳಿಲ್ಲದೆ ಸದಸ್ಯತ್ವ ನಿರಾಕರಿಸುವಂತಿಲ್ಲ.

### ಕಲಂ 17

- ದಿವಾಳಿತನ ಕೋರಿ ಅರ್ಜಿ ಸಲ್ಲಿಸಿರುವವರು;
- ಸಂಘದ ವ್ಯವಹಾರಗಳನ್ನೇ ತಾವೂ ನಡೆಸುತ್ತಿರುವವರು;

- ಅದೇ ತರಹದ ಇನ್ನೊಂದು ಸಂಘದಲ್ಲಿ ಸದಸ್ಯರಾಗಿರುವವರು;
- ಸಂಘದ ಅಥವಾ ಅದಕ್ಕೆ ಆರ್ಥಿಕ ನೆರವು ನೀಡುವ ಬ್ಯಾಂಕಿನ ನೌಕರರು;

ಮುಂತಾದವರು ಕಾಯಿದೆಯ ಪ್ರಕಾರ ಸದಸ್ಯತ್ವಕ್ಕೆ ಅನರ್ಹರಾಗಿರುತ್ತಾರೆ.

ಸದಸ್ಯತ್ವ ಬೇಕಾದ ವ್ಯಕ್ತಿಯು ಸಂಘಕ್ಕೆ ಅರ್ಜಿಯನ್ನು ಸಲ್ಲಿಸಬೇಕು. ಸಂಘವು ಆ ಅರ್ಜಿಯನ್ನು 2 ತಿಂಗಳ ಒಳಗಾಗಿ ವಿಲೇವಾರಿ ಮಾಡಬೇಕು; ಎಂದರೆ ಸದಸ್ಯತ್ವ ನೀಡಬೇಕು ಅಥವಾ ನಿರಾಕರಿಸಬೇಕು. ನಿರಾಕರಿಸಿದಲ್ಲಿ ಕಾರಣಗಳನ್ನು ಪತ್ರ ಮುಖೇನ ತಿಳಿಸಬೇಕು.ಎರಡು ತಿಂಗಳಾದರೂ ಅರ್ಜಿದಾರರಿಗೆ ನಿರ್ಧಾರ ಬರೆದಿದ್ದಲ್ಲಿ ಅವನ ಸದಸ್ಯತ್ವ ಅಂಗೀಕಾರವಾಗಿದೆ ಎಂದು ಭಾವಿಸತಕ್ಕದ್ದು.

ಸದಸ್ಯತ್ವ ಪಡೆದು ನಂತರ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸದೆ ಇರುವ ಸದಸ್ಯರ ಸಂಖ್ಯೆ ಹೆಚ್ಚಾಯಿತು.ಆದ್ದರಿಂದ ಈಗ ಬಂದಿರುವ ಕಾನೂನಿನ ಪ್ರಕಾರ ಒಂದೇ ಸಮನೆ 3 ವರ್ಷಗಳ ಕಾಲ ಒಬ್ಬ ಸದಸ್ಯರು ಉಪನಿಯಮಗಳಲ್ಲಿ ನಿಗಧಿ ಪಡಿಸಿದ ಹೊಣೆಗಾರಿಕೆಗಳನ್ನು ನಿರ್ವಹಿಸದಿದ್ದರೆ ಆತನು ಮೂರು ವರ್ಷಗಳ ಕಾಲ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಒಬ್ಬ ಸದಸ್ಯನ ಸದಸ್ಯತ್ವವು ಕೆಳಕಂಡ ಪರಿಸ್ಥಿತಿಗಳಲ್ಲಿ ನಿಂತುಹೋಗುತ್ತದೆ.

- ರಾಜೀನಾಮೆ
- ಸಾವು
- ಅನರ್ಹತೆಗಳು ಉಂಟಾಗುವಿಕೆ
- ಷೇರು ಅಥವಾ ಇತರ ಹಿತಾಸಕ್ತಿಗಳನ್ನು ಇನ್ನೊಬ್ಬ ಸದಸ್ಯರಿಗೆ ವರ್ಗಾಯಿಸಿದಾಗ

ಒಂದು ಸಂಘವು ಯಾವುದೇ ವ್ಯಕ್ತಿಯನ್ನು ನಾಮಮಾತ್ರ ಸದಸ್ಯ ಅಥವಾ ಸಹ ಸದಸ್ಯ ಆಗಿ ಸೇರಿಸಿಕೊಳ್ಳಬಹುದು. ಅಲ್ಲದೆ, ಯಾವುದೇ ಫರ್ಮ್, ಬೇರೆ ಸಹಕಾರ ಸಂಘ, ಬ್ಯಾಂಕಿಂಗ್ ಕಂಪನಿ ಮುಂತಾದುವನ್ನು ಸಹ/ನಾಮಮಾತ್ರ ಅಥವಾ ಸಹಸದಸ್ಯ ಆಗಿ ಸಂಘಕ್ಕೆ ಸೇರಿಸಿಕೊಳ್ಳಬಹುದು. ಸ್ವಸಹಾಯ ಗುಂಪುಗಳನ್ನು ನಾಮ ಮಾತ್ರ ಸದಸ್ಯ ಆಗಿ ಸೇರಿಸಿಕೊಳ್ಳಬಹುದು.ಸಂಘದಲ್ಲಿ ಸಹ ಸದಸ್ಯರ ಸಂಖ್ಯೆ ಒಟ್ಟು ಸದಸ್ಯರ ಸಂಖ್ಯೆಯ ಶೇಕಡಾ 15ರಷ್ಟನ್ನು ಮೀರುವಂತಿಲ್ಲ.

ಒಬ್ಬ ಸದಸ್ಯನು ಷೇರು ಹಣ ಪ್ರವೇಶ ಶುಲ್ಕ ಮುಂತಾದುವನ್ನು ಪೂರ್ತಿ ಸಂದಾಯ ಮಾಡಿದ ಮೇಲ ಮತ್ತು ಸಂಘದ ಆಡಳಿತ ಮಂಡಳಿಯು ಅವನ ಸದಸ್ಯತ್ವವನ್ನು ಅಂಗೀಕರಿಸದ್ದಲ್ಲಿ ಮಾತ್ರ ಅವನಿಗೆ ಸದಸ್ಯತ್ವದ ಹಕ್ಕುಗಳು ಲಭಿಸುತ್ತವೆ.

ಸದಸ್ಯರ ಮತಗಳು: ಪ್ರತಿ ಸದಸ್ಯನಿಗೆ ಸಂಘದ ವ್ಯವಹಾರಗಳಲ್ಲಿ ಒಂದು ಮತ ನೀಡುವ ಹಕ್ಕು ಇರುತ್ತದೆ. ಸಹಕಾರ ಸಂಘದಲ್ಲಿ ಮತವು ಷೇರು ಹಣದ ಮೇಲೆ – ಕಂಪನಿಗಳಲ್ಲಿ ಇದ್ದಂತೆ – ಅವಲಂಬಿಸಿರುವುದಿಲ್ಲ. ಪ್ರತಿ ಸದಸ್ಯನಿಗು ಒಂದು ಮತ ಇರುತ್ತದೆ. ಕೆಳಕಾಣಿಸಿದವರಿಗೆ ಮತ ಹಕ್ಕು ಇರುವುದಿಲ್ಲ.

- ನಾಮಮಾತ್ರ ಅಥವಾ ಸಹಸದಸ್ಯರು;
- ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡದೆ ಸುಸ್ತಿದಾರರಾಗಿರುವವರು;
- ಸಭೆಯು ನಡೆಯುವ ದಿನಕ್ಕೆ ಸದಸ್ಯರಾಗಿ 12 ತಿಂಗಳುಗಳೂ ಆಗಿಲ್ಲದೆ ಇರುವವರು.
- ಕಳೆದ 5 ಮಹಾಸಭೆಗಳಲ್ಲಿ ಕಡೆಯಪಕ್ಷ ಮೂರು ಮಹಾ ಸಭೆಗಳಿಗೆ ಹಾಜರಾಗಿಲ್ಲದೆ ಇರುವವರು
- ಉಪನಿಯಮಗಳಲ್ಲಿ ನಿಗಧಿಪಡಿಸಿದ ಸೇವೆ ಅಥವಾ ಸೌಲಭ್ಯಗಳನ್ನು ಸತತವಾಗಿ 3 ವರ್ಷಗಳ ಕಾಲ ಉಪಯೋಗಿಸಿಲ್ಲದೆ ಇರುವವರು.

ಇದಲ್ಲದೇ ಯಾವುದೇ ಸಹಕಾರ ಸಂಘವು ಇನ್ನೊಂದು ಸಹಕಾರ ಸಂಘದ ಮಹಾ ಸಭೆಯಲ್ಲಿ ಭಾಗವಹಿಸುವಾಗ ಕೆಳಕಂಡ ಸಂದರ್ಭಗಳಲ್ಲಿ ಅದಕ್ಕೆ ಮತದಾನದ ಹಕ್ಕಿರುವುದಿಲ್ಲ.

- ಆಡಳಿತ ಮಂಡಳಿ ರದ್ದಾಗಿರುವಾಗ;
- ವಿಶೇಷಾಧಿಕಾರಿ ನೇಮಕ ಆಗಿರುವಾಗ;
- ಸಮಾಪನೆಗಾಗಿ ನಿಬಂಧಕರು ಆದೇಶ ಮಾಡಿರುವಾಗ;
- ಕೆಲಸವನ್ನೇ ಪ್ರಾರಂಭಿಸಿಲ್ಲದೆ ಇರುವಾಗ;
- ಕೆಲಸ ಮಾಡುವುದನ್ನು ನಿಲ್ಲಿಸಿರುವಾಗ;
- ಶೇಕಡಾ 50ಕ್ಕಿಂತ ಕಡಿಮೆ ವಸೂಲಾತಿ ಮಾಡಿರುವ ಅಥವಾ ವಸೂಲಿ ಮಾಡಿದ ಹಣವನ್ನು ತನ್ನ ಆರ್ಥಿಕ ಬ್ಯಾಂಕಿಗೆ, ಕಾಯಿದೆಯ ಪ್ರಕಾರ ಜಮಾ ಮಾಡಿಲ್ಲದ ಪತ್ತಿನ ಸಹಕಾರ ಸಂಘಗಳು.

ಒಂದು ಸಂಘದ ಪ್ರತಿನಿಧಿ ಇನ್ನೊಂದು ಸಂಘದ ಸಭೆಗಳಲ್ಲಿ ಭಾಗವಹಿಸುವಾಗ ಸಹ ಕೆಲವು ಸಂದರ್ಭಗಳಲ್ಲಿ ಅವನಿಗೆ ಮತದಾನದ ಹಕ್ಕು ಇರುವುದಿಲ್ಲ.

- ಅವನು ಪ್ರತಿನಿಧಿಸಿರುವ ಸಂಘದ ಆಡಳಿತ ಮಂಡಳಿ ರದ್ದಾಗಿರುವಾಗ;
- ಅವನು ಪ್ರತಿನಿಧಿಸಿರುವ ಸಂಘಕ್ಕೆ ವಿಶೇಷಾಧಿಕಾರಿ ನೇಮಕ ಆಗಿರುವಾಗ;
- ಅವನು ಪ್ರತಿನಿಧಿಸಿರುವ ಸಂಘದ ಸಮಾಪನೆಗಾಗಿ ನಿಬಂಧಕರು ಆದೇಶ ಮಾಡಿರುವಾಗ;
- ಅವನು ಪ್ರತಿನಿಧಿಸಿರುವ ಸಂಘದಲ್ಲಿಯೇ ಅವನು ತನ್ನ ನಿರ್ದೇಶಕನ ಸ್ಥಾನ ಕಳೆದುಕೊಂಡಾಗ.

ಒಬ್ಬ ಸದಸ್ಯನು ಸಂಘದಲ್ಲಿರುವ ತನ್ನ ಷೇರು ಹಣ ಮುಂತಾದ ಹಿತಾಸಕ್ತಿಗಳನ್ನು

- ಇನ್ನೊಬ್ಬ ಸದಸ್ಯನಿಗೆ ಕಾಯಿದೆಯ ಶರತ್ತುಗಳಿಗೆ ಒಳಪಟ್ಟು ವರ್ಗಾಯಿಸಬಹುದು.
- ಬೇರೊಬ್ಬರಿಗೆ ನೀಡಲು ನಾಮ ನಿರ್ದೇಶನ ಮಾಡಬಹುದು

ಒಬ್ಬ ಸದಸ್ಯನ ಆರ್ಥಿಕ ಜವಾಬ್ದಾರಿ ಅವನ ಷೇರು ಹಣಕ್ಕೆ ಸೀಮಿತವಾಗಿರುತ್ತದೆ.ಪ್ರತಿ ಸದಸ್ಯನಿಗೆ ಸಂಘದಲ್ಲಿ ತನ್ನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂಘದ ಮಾಹಿತಿ ಮತ್ತು ಲೆಕ್ಕಪತ್ರಗಳನ್ನು ಪರಿಶೀಲಿಸುವ ಹಕ್ಕು ಇರುತ್ತದೆ.

ಮುಂದುವರೆಯುವುದು...